# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕಃ30.12.2025

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ :08192–208029 ಇ–ಮೇಲ್:registrar@davangereuniversity.ac.in

: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/1032/2025–26/ 4286 ದಿನಾಂಕ:06.01.2026

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:30.12.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:30.12.2025 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಪ್ರಾಧಿಕಾರ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಹಣಕಾಸು/ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:30.12.2025 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ದಾವಿವಿ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಡಾ. ಬಿ. ಎನ್. ಉಮೇಶ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಶ್ರೀ ಭರಮಗೌಡ ಪಾಟೀಲ., ಪ್ರಾಚಾರ್ಯರು : ಸದಸ್ಯರು
6. ಡಾ. ಜೋಮನ್ ಕೆ.ಜೆ., ಪ್ರಾಚಾರ್ಯರು : ಸದಸ್ಯರು
7. ಶ್ರೀ ತಿಪ್ಪೇಶ್ ಜಿ.ಆರ್., ಪ್ರಾಚಾರ್ಯರು : ಸದಸ್ಯರು
8. ಡಾ. ಎ.ಜೆ. ನೀತಾ., ಪ್ರಾಚಾರ್ಯರು : ಸದಸ್ಯರು
9. ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
10. ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
11. ಡಾ. ಜಿ.ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
12. ಶ್ರೀ ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
13. ಶ್ರೀ ಪ್ರಶಾಂತ್ ಆರ್. ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
14. ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
15. ಪ್ರೊ. ರವಿಕುಮಾರ್ ಪಾಟೀಲ್ ಹೆಚ್.ಎಸ್., ಪ್ರಾಧ್ಯಾಪಕರು, ದಾವಿವಿ : ಸದಸ್ಯರು
16. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
17. ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಸೂಪರ್ ಟೈಂ ಸ್ಕೇಲ್) ಕುಲಸಚಿವರು (ಆಡಳಿತ) : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 17 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜುಗಳ ಪ್ರಾಂಶುಪಾಲರುಗಳ ಜೇಷ್ಠತೆಯ ಮೇರೆಗೆ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ 1) ಶ್ರೀ ಭರಮಗೌಡ ಪಾಟೀಲ 2) ಡಾ. ಜೋಮನ್ ಕೆ.ಜೆ 3) ಶ್ರೀ ತಿಪ್ಪೇಶ್ ಜಿ.ಆರ್ ಹಾಗೂ 4) ಡಾ. ಎ.ಜೆ. ನೀತಾ ಇವರುಗಳಿಗೆ ಅಭಿನಂದಿಸಿ ಸಭೆಗೆ ಸ್ವಾಗತಿಸಿದರು. ಮುಂದುವರೆದು, ಶ್ರೀಮತಿ ಸಾಲು ಮರದ ತಿಮ್ಮಕ್ಕ ಹಾಗೂ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು ಹಾಗೂ ಶಾಸಕರು (ದಾವಣಗೆರೆ ದಕ್ಷಿಣ), ಕರ್ನಾಟಕ ಸರ್ಕಾರ – ಇವರ ನಿಧನಕ್ಕೆ ಮೌನಾಚರಣೆ ಮೂಲಕ ಸಂತಾಪವನ್ನು ಸೂಚಿಸಿ, ಶ್ರದ್ಧಾಂಜಲಿ ಸಲ್ಲಿಸಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು.

ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(12/25) |

**–ಃಟಿಪ್ಪಣಿಃ–**

**ವಿಷಯಃ ದಿನಾಂಕ:29.10.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:29.10.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:07.11.2025 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಇದುವರೆಗೂ ಸದರಿ ನಡಾವಳಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:30.12.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಿನಾಂಕಃ29.10.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಸದರಿ ನಡಾವಳಿಗಳ ವಿಷಯ ಸಂಖ್ಯೆ:38/09 (c) (10/25) ನಿರ್ಣಯದಲ್ಲಿ ಎಂ.ಬಿ.ಎ ಬದಲು ಎಂ.ಸಿ.ಎ. ಎಂದು ನಮೂದಾಗಿರುವುದನ್ನು **"ಎಂ.ಬಿ.ಎ"** ಎಂದು ತಿದ್ದುಪಡಿ ಮಾಡಿಕೊಂಡು ಓದಲು ಸಭೆಯು ನಿರ್ಣಯಿಸಿತು. ಉಳಿದಂತೆ ಇತರೆ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(12/25) |

## –:ಟಿಪ್ಪಣಿ:–

**ವಿಷಯಃ ದಿನಾಂಕ:29.10.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯ (Action Taken Report) ದೃಢೀಕರಣ ಕುರಿತು.**

*****

ದಿನಾಂಕ:29.10.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಸಿದ್ಧಪಡಿಸಲಾಗಿದ್ದು, ದಿನಾಂಕ:30.12.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಿನಾಂಕಃ29.10.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯ (Action Taken Report) ಕುರಿತು ಚರ್ಚಿಸಿ ಅನುಪಾಲನಾ ವರದಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.02(a)/(12/25) |

# –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.**

*********

ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಈ ಕೆಳಕಂಡ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಎರಡು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವ ಹಾಗೂ ಮುಕ್ತಾಯಗೊಂಡಿರುವುದರಿಂದ, ಸದರಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಜೇಷ್ಠತೆಯ ಮೇರೆಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಸಂಬಂಧ ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ. ಸಂ. | ಹೆಸರು | ವಿಭಾಗ | ಅಧ್ಯಕ್ಷರು/ ಸಂಯೋಜನಾಧಿಕಾರಿಗಳು | ಅವಧಿ |
|---|---|---|---|---|
| 1 | ಡಾ. ಜಯರಾಮಯ್ಯ ವಿ, ಪ್ರಾಧ್ಯಾಪಕರು | ಕನ್ನಡ | ಅಧ್ಯಕ್ಷರು | 18.01.2024 ರಿಂದ 17.01.2026 |
| 2 | ಡಾ. ಮುತ್ತನಗೌಡ ಕಳಸದ, ಪ್ರಾಧ್ಯಾಪಕರು | ಭೌತಶಾಸ್ತ್ರ | ಅಧ್ಯಕ್ಷರು | 18.01.2024 ರಿಂದ 17.01.2026 |
| 3 | ಡಾ. ಶಿಶುಪಾಲ ಎಸ್, ಪ್ರಾಧ್ಯಾಪಕರು | ಸೂಕ್ಷ್ಮಜೀವಶಾಸ್ತ್ರ | ಅಧ್ಯಕ್ಷರು | 18.01.2024 ರಿಂದ 17.01.2026 |
| 4 | ಡಾ. ನಿರಂಜನ ಎಂ.ಹೆಚ್. ಪ್ರಾಧ್ಯಾಪಕರು | ಜೈವಿಕತಂತ್ರಜ್ಞಾನ | ಅಧ್ಯಕ್ಷರು | 18.01.2024 ರಿಂದ 17.01.2026 |
| 5 | ಡಾ. ಚಂದ್ರಕಾಂತ ನಾಯ್ಕೋಡಿ, ಪ್ರಾಧ್ಯಾಪಕರು | ಗಣಕವಿಜ್ಞಾನ | ಅಧ್ಯಕ್ಷರು | 18.01.2024 ರಿಂದ 17.01.2026 |
| 6 | ಡಾ. ಸುಪ್ರಿಯಾ ಆರ್, ಪ್ರಾಧ್ಯಾಪಕರು | ವಾಣಿಜ್ಯಶಾಸ್ತ್ರ | ಅಧ್ಯಕ್ಷರು | 18.01.2024 ರಿಂದ 17.01.2026 |
| 7 | ಡಾ. ಶಶಿಧರ್ ಆರ್, ಪ್ರಾಧ್ಯಾಪಕರು | ಎಂ.ಬಿ.ಎ. | ಅಧ್ಯಕ್ಷರು | 18.01.2024 ರಿಂದ 17.01.2026 |
| 8 | ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು | ಪರಿಸರ ವಿಜ್ಞಾನ | ಸಂಯೋಜನಾಧಿಕಾರಿ | 18.01.2024 ರಿಂದ 17.01.2026 |
| 9 | ಡಾ. ಬಸವಣ್ಣ ಎಂ, ಪ್ರಾಧ್ಯಾಪಕರು | ಎಂ.ಸಿ.ಎ. | ಅಧ್ಯಕ್ಷರು | 27.10.2023 ರಿಂದ 26.10.2025 |

## <u>ನಿರ್ಣಯ</u>

ವಿಶ್ವವಿದ್ಯಾನಿಲಯದ ಈ ಕೆಳಕಂಡ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

| ಕ್ರ. ಸಂ. | ಹೆಸರು | ವಿಭಾಗ | ಅಧ್ಯಕ್ಷರು/ ಸಂಯೋಜನಾಧಿಕಾರಿಗಳು | ಅವಧಿ |
|---|---|---|---|---|
| 1 | ಡಾ. ವಿಶ್ವನಾಥ ಹೆಚ್ ಪ್ರಾಧ್ಯಾಪಕರು | ಕನ್ನಡ | ಅಧ್ಯಕ್ಷರು | 18.01.2026 ರಿಂದ 31.07.2026 (ವಯೋನಿವೃತ್ತಿ ಹೊಂದುತ್ತಿರುವುದರಿಂದ) |
| 2 | ಡಾ. ಈಶ್ವರಪ್ಪ ಕೆ.ಎಂ., ಪ್ರಾಧ್ಯಾಪಕರು | ಭೌತಶಾಸ್ತ್ರ | ಅಧ್ಯಕ್ಷರು | 18.01.2026 ರಿಂದ 17.01.2028 |
| 3 | ಡಾ. ಗಾಯತ್ರಿ ದೇವರಾಜ, ಪ್ರಾಧ್ಯಾಪಕರು | ಸೂಕ್ಷ್ಮಜೀವಶಾಸ್ತ್ರ | ಅಧ್ಯಕ್ಷರು | 18.01.2026 ರಿಂದ 17.01.2028 |
| 4 | ಡಾ. ಗೋಪಿನಾಥ ಎಸ್.ಎಂ., ಪ್ರಾಧ್ಯಾಪಕರು | ಜೈವಿಕತಂತ್ರಜ್ಞಾನ | ಅಧ್ಯಕ್ಷರು | 18.01.2026 ರಿಂದ 17.01.2028 |
| 5 | ಡಾ. ಚಂದ್ರಕಾಂತ ನಾಯ್ಕೋಡಿ, ಪ್ರಾಧ್ಯಾಪಕರು | ಗಣಕ ವಿಜ್ಞಾನ | ಅಧ್ಯಕ್ಷರು | 18.01.2026 ರಿಂದ 17.01.2028<br>ಡಾ. ಬಸವಣ್ಣ ಎಂ. ಪ್ರಾಧ್ಯಾಪಕರು, ಇವರು ಎಂ.ಸಿ.ಎ. ವಿಭಾಗಕ್ಕೆ ಅಧ್ಯಕ್ಷರಾಗಿರುವುದರಿಂದ ಡಾ. ಚಂದ್ರಕಾಂತ್ ನಾಯ್ಕೊಡಿ ಇವರನ್ನು 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲಾಗಿದೆ. |
| 6 | ಡಾ. ಸೀರಪ್ಪ ಐ.ಬಿ, ಪ್ರಾಧ್ಯಾಪಕರು | ವಾಣಿಜ್ಯಶಾಸ್ತ್ರ | ಅಧ್ಯಕ್ಷರು | 18.01.2026 ರಿಂದ 17.01.2028 |
| 7 | ಡಾ. ಜೆ.ಕೆ. ರಾಜು, ಪ್ರಾಧ್ಯಾಪಕರು | ಎಂ.ಬಿ.ಎ. | ಅಧ್ಯಕ್ಷರು | 18.01.2026 ರಿಂದ 17.01.2028 |
| 8 | ಡಾ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು | ಪರಿಸರ ವಿಜ್ಞಾನ | ಸಂಯೋಜನಾಧಿಕಾರಿ | 18.01.2026 ರಿಂದ 17.01.2028 |
| 9 | ಡಾ. ಬಸವಣ್ಣ ಎಂ, ಪ್ರಾಧ್ಯಾಪಕರು | ಎಂ.ಸಿ.ಎ. | ಅಧ್ಯಕ್ಷರು | 27.10.2025 ರಿಂದ 26.10.2027<br>ಡಾ. ಚಂದ್ರಕಾಂತ ನಾಯ್ಕೋಡಿ,. ಪ್ರಾಧ್ಯಾಪಕರು, ಇವರು ಗಣಕ ವಿಜ್ಞಾನ. ವಿಭಾಗಕ್ಕೆ ಅಧ್ಯಕ್ಷರಾಗಿರುವುದರಿಂದ ಡಾ. ಬಸವಣ್ಣ ಎಂ. ಇವರನ್ನು 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರೆಸಲಾಗಿದೆ |

ಕುಲಸಚಿವರು                                                  ಕುಲಪತಿಗಳು

| ಮಾ.ಸ.ನಿ. ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.02(b)/(12/25) |

## –: ಟಿಪ್ಪಣಿ :–

**ವಿಷಯಃ** **ಡಾ. ರಘುನಾಥ ಕೆ.ಆರ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರ ತಾಯಿಯ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಮಾಡಿಸಿದ ವೈದ್ಯಕೀಯ ವೆಚ್ಚದ ಒಟ್ಟು ಮೊತ್ತ ರೂ.1,35,109/–ಗಳ ಮರುಭರಿಕೆ ಕುರಿತು.**

ಉಲ್ಲೇಖ: 1. ಡಾ. ರಘುನಾಥ ಕೆ.ಆರ್, ಸಹಾಯಕ ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿವಿ/ಗಅವಿ/2025–26, ದಿನಾಂಕಃ11.09.2025

2. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ29.10.2025

*********

ಡಾ. ರಘುನಾಥ ಕೆ.ಆರ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು **ಕಸ್ತೂರಿ ಬಾ ಆಸ್ಪತ್ರೆ, ಮಣಿಪಾಲ –** ಇಲ್ಲಿ ತಮ್ಮ ತಾಯಿಯ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಮಾಡಿಸಿದ ವೈದ್ಯಕೀಯ ವೆಚ್ಚದ (1,08,173+70,797) ಒಟ್ಟು ಮೊತ್ತ ರೂ.1,78,970/–ಗಳ ಮೂಲ ಬಿಲ್ಲುಗಳನ್ನು ಸಲ್ಲಿಸಿ, ಮರುಭರಿಕೆ ಮಾಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಗಳು (91,739 + 43,370) ರೂ.1,35,109/–ಗಳ ಮರುಭರಿಕೆಗಾಗಿ ಶಿಫಾರಸ್ಸು ನೀಡಿರುತ್ತಾರೆ.

ತತ್ಸಂಬಂಧ ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸರ ಡಾ. ರಘುನಾಥ ಕೆ.ಆರ್, ಸಹಾಯಕ ಪ್ರಾಧ್ಯಾಪಕರು – ಇವರ ವೈದ್ಯಕೀಯ ವೆಚ್ಚದ ಒಟ್ಟು ಮೊತ್ತ ರೂ.1,35,109/–ಗಳನ್ನು ಮರುಭರಿಕೆ ಮಾಡಲು ಪ್ರಸ್ತಾವನೆಯನ್ನು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಡಾ. ರಘುನಾಥ ಕೆ.ಆರ್, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ತಮ್ಮ ತಾಯಿಯ ಅನಾರೋಗ್ಯದ ನಿಮಿತ್ತ ಕಸ್ತೂರಿ ಬಾ ಆಸ್ಪತ್ರೆ, ಮಣಿಪಾಲ – ಇಲ್ಲಿ ಚಿಕಿತ್ಸೆ ಮಾಡಿಸಿದ ವೈದ್ಯಕೀಯ ವೆಚ್ಚಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಗಳು ಶಿಫಾರಸ್ಸು ಮಾಡಿರುವ **ರೂ.1,35,109/–** ಗಳನ್ನು ಸದರಿಯವರಿಗೆ ಮರುಭರಿಕೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(12/25) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡಿರುವ ಕುರಿತು.**

ಉಲ್ಲೇಖ:
1. ವಿವಿ ಅಧಿಸೂಚನೆ ಪತ್ರ ಸಂಖ್ಯೆಃ ದಾವಿವಿ / ಮಾಸನಿ / 220 / 2025–26 ದಿನಾಂಕಃ22.07.2025
2. ವಿವಿ ಅಧಿಸೂಚನೆ ಪತ್ರ ಸಂಖ್ಯೆಃ ದಾವಿವಿ / ಮಾಸನಿ / 220–2 / 2025–26 ದಿನಾಂಕಃ03.09.2025
3. ಡಾ॥ ಸೀತಾಲಕ್ಷ್ಮೀ ಡಿ ನಿವೃತ್ತ ವೈದ್ಯಾಧಿಕಾರಿಗಳು ಇವರ ಮನವಿ ದಿನಾಂಕಃ15.11.2025
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ21.11.2025

*********

ಉಲ್ಲೇಖ (1) ಮತ್ತು (2)ರ ಅಧಿಸೂಚನೆಯಲ್ಲಿ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನು ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಜಾಹಿರಾತು ನೀಡಲಾಗಿತ್ತು ಆದರೆ ವಿಶ್ವವಿದ್ಯಾನಿಲಯದ ಆರೊಗ್ಯ ಕೇಂದ್ರಕ್ಕೆ ಬೇಕಾದಂತಹ M.B.B.S ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿರುವ ಕಾರಣ ಉಲ್ಲೇಖ (3)ರಲ್ಲಿ ಡಾ॥ ಸೀತಾಲಕ್ಷ್ಮೀ ಡಿ ನಿವೃತ್ತ ವೈದ್ಯಾಧಿಕಾರಿಗಳು, ಕುಟುಂಬ ಕಲ್ಯಾಣ ಇಲಾಖೆ, ದಾವಣಗೆರೆ ಇವರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳ ಅಗತ್ಯತೆ ಇರುವುದಾಗಿ ತಿಳಿದುಬಂದಿದ್ದು, ಸದರಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸಲು ಅವಕಾಶ ನೀಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಮನವಿಯ ಮೇರೆಗೆ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ಸೇವೆ ಸಲ್ಲಿಸಲು ಒಪ್ಪಿಗೆ ನೀಡಿರುತ್ತಾರೆ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳ ಅಗತ್ಯತೆಯನ್ನು ಮನಗಂಡು ಉಲ್ಲೇಖ (4)ರಲ್ಲಿ ಮಾನ್ಯ ಕುಲಪತಿಗಳು ಡಾ.ಸೀತಾಲಕ್ಷ್ಮೀ ಡಿ ದಾವಣಗೆರೆ ಇವರನ್ನು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾಗಿ ಮಾಹೆಯಾನ **ರೂಃ50,000/–(ರೂಪಾಯಿ ಐವತ್ತು ಸಾವಿರ ಮಾತ್ರ)**ಗಳ ಗೌರವ ಸಂಭಾವನೆ ಆಧಾರದ ಮೇಲೆ ಸಿಂಡಿಕೇಟ್ ಘಟನೋತ್ತರ ಅನುಮೋದನೆ ಕಾಯ್ದಿರಿಸಿ ದಿನಾಂಕಃ24.11.2025 ರಿಂದ ಅನ್ವಯವಾಗುವಂತೆ 11 ತಿಂಗಳ ಅವಧಿಗೆ ನೇಮಕ ಮಾಡಲಾಗಿರುತ್ತದೆ ಈ ಕುರಿತು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ಡಾ. ಸೀತಾಲಕ್ಷ್ಮೀ ಡಿ., ನಿವೃತ್ತ ವೈದ್ಯಾಧಿಕಾರಿಗಳು, ಕುಟುಂಬ ಕಲ್ಯಾಣ ಇಲಾಖೆ, ದಾವಣಗೆರೆ ಇವರನ್ನು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾಗಿ 11 ತಿಂಗಳ ಅವಧಿಗೆ ನೇಮಕ ಮಾಡಿ ಮಾಹೆಯಾನ ರೂ.50,000/– ಗಳ ಗೌರವ ಸಂಭಾವನೆಯನ್ನು ನಿಗಧಿಪಡಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                                    ಕುಲಪತಿಗಳು

| ಮಾ.ಸ.ನಿ. ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(12/25) |

## –: ಟಿಪ್ಪಣಿ :–

ವಿಷಯಃ **ದಿ. ಪ್ರೊ॥ ಅನಿತ ಹೆಚ್ ಎಸ್, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ ಇವರಿಗೆ 7ನೇ ಪರಿಷ್ಕೃತ ವೇತನ ಶ್ರೇಣಿಯನ್ವಯ, ನಿವೃತ್ತಿ ವೇತನ ಮತ್ತು ನಿವೃತ್ತಿ ಸೌಲಭ್ಯವನ್ನು ಪರಿಷ್ಕರಿಸಿ ಪಾವತಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆಃ ಆಇ 41 ಎಸ್ಆರ್‌ಪಿ 2024 ಬೆಂಗಳೂರು, ದಿನಾಂಕಃ 30.06.2025.
2. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ 03.10.2025

*********

ದಿ. ಪ್ರೊ. ಅನಿತಾ ಹೆಚ್.ಎಸ್, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರಿಗೆ ನಿಯಮಾನುಸಾರ 6ನೇ ಯುಜಿಸಿ ವೇತನ ಶ್ರೇಣಿಯಲ್ಲಿ ನಿವೃತ್ತಿ ಹೊಂದಿದವರಿಗೆ ನಿಗದಿಪಡಿಸಬೇಕಾದ ಪಿಂಚಣಿಯ ಮೂಲ ವೇತನ ರೂ.75,300/–ಗಳನ್ನು ಪರಿಷ್ಕರಿಸಿ 7ನೇ ರಾಜ್ಯ ಪರಿಷ್ಕೃತ ವೇತನ ಶ್ರೇಣಿ ಪಿಂಚಣಿಯ ಮೂಲ ವೇತನ ರೂ.1,19,351/– ಗಳಿಗೆ ನಿಗದಿಪಡಿಸಿ ದಿನಾಂಕಃ 01.08.2025ರಿಂದ ಒಟ್ಟು ಪಿಂಚಣಿಯನ್ನು ಪ್ರತಿ ತಿಂಗಳು ಸದರಿಯವರ ಪತಿಯಾದ ಶ್ರೀ ದೇವರಾಜ ಹೆಚ್.ಬಿ, ಸಹಾಯಕ ಕುಲಸಚಿವರು ಇವರಿಗೆ ಪಾವತಿಸಬೇಕಾಗಿರುತ್ತದೆ.

ಈಗಾಗಲೇ ದಿ. ಪ್ರೊ. ಅನಿತಾ ಹೆಚ್.ಎಸ್., ಪ್ರಾಧ್ಯಾಪಕರು ಇವರ ಪತಿಯಾದ ಶ್ರೀ ಹೆಚ್.ಬಿ. ದೇವರಾಜ, ಸಹಾಯಕ ಕುಲಸಚಿವರು ಇವರಿಗೆ ದಿನಾಂಕಃ01.08.2025 ರಿಂದ ನವೆಂಬರ್ 2025ರವರೆಗೆ ಪಿಂಚಣಿಯ ಮೂಲ ವೇತನ ರೂ.75,300/– ಗಳನ್ವಯ ಒಟ್ಟು ಪಿಂಚಣಿಯನ್ನು ಪಾವತಿಸಲಾಗಿರುತ್ತದೆ. ಮುಂದುವರೆದು ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ ನಿಯಮಾನುಸಾರ 7ನೇ ರಾಜ್ಯ ವೇತನ ಶ್ರೇಣಿಯ ಪಿಂಚಣಿ ಮೂಲ ವೇತನ ರೂ.1,19,351/– ಗಳನ್ನು ನಿಗದಿಪಡಿಸಿ ಜನವರಿ 2026ರಿಂದ ಪ್ರತಿ ತಿಂಗಳು ಒಟ್ಟು ಪಿಂಚಣಿಯನ್ನು ಸದರಿಯವರಿಗೆ ಪಾವತಿಸಲು ಹಾಗೂ ದಿನಾಂಕಃ 01.08.2025ರಿಂದ ಡಿಸೆಂಬರ್–2025ರವರೆಗಿನ ಬಾಕಿ ವ್ಯತ್ಯಾಸದ ಮೊತ್ತ ಹಾಗೂ ತುಟ್ಟಿ ಭತ್ಯೆಯ ವ್ಯತ್ಯಾಸದ ಮೊತ್ತ ಪಾವತಿಸಲು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಲಾಗಿದೆ.

### :: ನಿರ್ಣಯ ::

ದಿ. ಪ್ರೊ. ಅನಿತಾ ಹೆಚ್.ಎಸ್., ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ ಸರ್ಕಾರದ ಆದೇಶದನ್ವಯ ನಿಯಮಾನುಸಾರ 7ನೇ ರಾಜ್ಯ ಪರಿಷ್ಕೃತ ವೇತನ ಶ್ರೇಣಿ ಪಿಂಚಣಿಯ ಮೂಲ ವೇತನ ರೂ.1,19,351/– ಗಳಿಗೆ ನಿಗದಿಪಡಿಸಿ ಜನವರಿ–2026 ರಿಂದ ಪ್ರತಿ ತಿಂಗಳು ಒಟ್ಟು ಪಿಂಚಣಿಯನ್ನು ಹಾಗೂ ದಿನಾಂಕ:.01.08.2025 ರಿಂದ ಡಿಸೆಂಬರ್–2025 ರ ವರೆಗಿನ ಬಾಕಿ ವ್ಯತ್ಯಾಸದ ಮೊತ್ತ ಹಾಗೂ ತುಟ್ಟಿ ಭತ್ಯೆಯ ವ್ಯತ್ಯಾಸದ ಮೊತ್ತವನ್ನು ಸದರಿಯವರ ಪತಿಯಾದ ಶ್ರೀ ದೇವರಾಜ ಹೆಚ್.ಬಿ, ಸಹಾಯಕ ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರಿಗೆ ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ಸಿಂ.02(e)/(12/25) |

## –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ ಅತಿಥಿ ಉಪನ್ಯಾಸಕರ ವೇತನ ಹೆಚ್ಚಿಸುವ ಕುರಿತು.**

ಉಲ್ಲೇಖ:
1. ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯ ದಿನಾಂಕ:09.09.2025
2. ವಿವಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ದಾವಿವಿ/ಮಾಸನಿ/550/2025–26 ದಿನಾಂಕ:13.10.2025
3. ದೃಶ್ಯಕಲಾವಿದ್ಯಾನಿಲಯದ ಅತಿಥಿ ಉಪನ್ಯಾಸಕರುಗಳ ಮನವಿ ಪತ್ರ ದಿನಾಂಕ:04.11.2025
4. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:17.12.2025

*********

ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ದೃಶ್ಯಕಲಾ ಮಹಾವಿದ್ಯಾಲಯದಲ್ಲಿನ ಸ್ನಾತಕ ಪದವಿ ವಿಷಯಗಳನ್ನು ಬೋಧಿಸಲು ನೇಮಕಾತಿ ಮಾಡಿಕೊಂಡ ಅತಿಥಿ ಉಪನ್ಯಾಸಕರುಗಳಿಗೆ ಉಲ್ಲೇಖ(1)ರ ಸಿಂಡಿಕೇಟ್ ಸಭೆಯಲ್ಲಿ ನಿಗದಿಪಡಿಸಿದ ವೇತನವನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಷ್ಕರಿಸಿ ಉಲ್ಲೇಖ (2)ರಲ್ಲಿ ಅತಿಥಿ ಉಪನ್ಯಾಸಕರುಗಳ ವೇತನ ನಿಗದಿಪಡಿಸಿ ಅಧಿಕೃತ ಜ್ಞಾಪನ ಹೊರಡಿಸಲಾಗಿರುತ್ತದೆ. ಉಲ್ಲೇಖ (3)ರಲ್ಲಿ ಸದರಿ ಕಾಲೇಜಿನಲ್ಲಿ 2025–26ನೇ ಸಾಲಿಗೆ ಬೋಧನಾ ಸಹಾಯಕರು/ಅತಿಥಿ ಉಪನ್ಯಾಸಕರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳು ಹೆಚ್ಚು ವರ್ಷ ಬೋಧನಾ ಅನುಭವವುಳ್ಳ ಅಧ್ಯಾಪಕರುಗಳಿಗೆ ಮತ್ತು ದಿನವಹಿ ಖರ್ಚುಗಳು ಸರಿದೂಗಿಸಲು ಪ್ರಸ್ತುತ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಹೆಚ್ಚಿಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾಲಯವು ದಾವಣಗೆರೆ ವಿಶ್ವವಿದ್ಯಾನಿಲಯ ಆರಂಭವಾದಗಿನಿಂದಲೂ ನೇರ ಆಡಳಿತಕ್ಕೊಳಪಟ್ಟಿದ್ದು, ಖಾಯಂ ಬೋಧನಾ ಸಿಬ್ಬಂದಿಗಳ ಕೊರತೆಯ ನಡುವೆ ಕಾರ್ಯ ನಿರ್ವಹಿಸುತ್ತಿದೆ. ಸದರಿ ಕಾಲೇಜು ನಗರ ಪ್ರದೇಶದಲ್ಲಿದ್ದು, ಜೀವನ ವೆಚ್ಚ ಗ್ರಾಮಿಣ ಪ್ರದೇಶಗಳಿಗಿಂತ ಹೆಚ್ಚಿರುತ್ತದೆ ಮತ್ತು ಸದರಿ ಕಾಲೇಜಿನ ಸ್ನಾತಕ ವಿಷಯಗಳನ್ನು ಬೋಧಿಸಲು ಅರ್ಜಿ ಸಲ್ಲಿಸುವ ಅರ್ಹ ಅಧ್ಯಾಪಕರುಗಳ ಸಂಖ್ಯೆ ಕಡಿಮೆ ಇರುತ್ತದೆ. ಈ ಹಿನ್ನೆಲೆಯಲ್ಲಿ 2025–26ನೇ ಸಾಲಿನ ದೃಶ್ಯಕಲಾ ಮಹಾವಿದ್ಯಾಲಯ ಕಾಲೇಜಿನ ಬೋಧನಾ ಸಹಾಯಕರುಗಳ ವೇತನವನ್ನು ಈ ಕೆಳಕಂಡಂತೆ ಪರಿಷ್ಕರಿಸುವ ಕುರಿತು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ಸಾಮಾನ್ಯ ಸಿಂಡಿಕೇಟ್ ಸಭೆಯ ಅನುಮೋದನೆಗೆ ಸಲ್ಲಿಸಿದೆ.

### :: ನಿರ್ಣಯ ::

ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಮಾನ್ಯ ಸಿಂಡಿಕೇಟ್ ಸದಸ್ಯರುಗಳು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ 03 ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಏಕರೂಪ ವೇತನ ನಿಗದಿಪಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಗಳು ಸರ್ಕಾರವು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಗುಣವಾಗಿ ಕ್ರಮವಹಿಸಲು ತಿಳಿಸಿರುವ ಹಿನ್ನೆಲೆಯಲ್ಲಿ 10 ವರ್ಷಕ್ಕಿಂತ ಹೆಚ್ಚು, 10 ರಿಂದ 5 ವರ್ಷ, 5 ರಿಂದ 3 ವರ್ಷ ಹಾಗೂ 3 ಕ್ಕಿಂತ ಕಡಿಮೆ ಬೋಧನಾ ಅನುಭವವಿದ್ದು ಕಾರ್ಯನಿರ್ವಹಿಸುತ್ತಿರುವವರಿಗೆ ವೇತನ ನಿಗದಿಪಡಿಸಲು ಕ್ರಮಕೈಗೊಳ್ಳಲಾಗುವುದೆಂದು ಹಾಗೂ ಕ್ರಮ ಕೈಗೊಂಡಿರುವ ಮಾಹಿತಿಯನ್ನು ಮುಂದಿನ ಸಿಂಡಿಕೇಟ್ ಸಭೆಯ ಅವಗಾಹನೆಗೆ ತಂದು ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ಕುಲಸಚಿವರು | ಕುಲಪತಿಗಳು

| ಮಾ.ಸ.ನಿ. ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ಸಿಂ.02(f)/(12/25) |

## –: ಟಿಪ್ಪಣಿ :–

**ವಿಷಯಃ** **ಶ್ರೀ ಎಸ್.ವಿ. ಲೋಕೇಶ್, ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ವಿಶ್ವವಿದ್ಯಾನಿಲಯ – ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸುವ ಕುರಿತು.**

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಪತ್ರ ಸಂಖ್ಯೆ:ಲೋಇ:164:ಸೇಎಸು: 2025, ದಿನಾಂಕ:31.05.2025
2. ಶ್ರೀ ಎಸ್.ವಿ ಲೋಕೇಶ್, ಕಾರ್ಯಪಾಲಕ ಅಭಿಯಂತರರು ಇವರ ಮನವಿ ದಿನಾಂಕ:10.12.2025
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ23.12.2025

*********

ಸರ್ಕಾರದ ಉಲ್ಲೇಖಿತ (1)ರ ಅಧಿಸೂಚನೆಯಲ್ಲಿ ಶ್ರೀ ಎಸ್.ವಿ. ಲೋಕೇಶ್, ಕಾರ್ಯಪಾಲಕ ಅಭಿಯಂತರರಾಗಿ ಇವರನ್ನು ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ನಿಯುಕ್ತಿಗೊಳಿಸಲಾಗಿದ್ದು, ಅದರನ್ವಯ ಶ್ರೀ ಎಸ್.ವಿ. ಲೋಕೇಶ್ ಇವರು ದಿನಾಂಕ:02.07.2025 ರಂದು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.

ಮುಂದುವರೆದು, ಸದರಿಯವರು ಉಲ್ಲೇಖಿತ (2)ರ ಪತ್ರದಲ್ಲಿ ವೈಯಕ್ತಿಕ ಕೋರಿಕೆ ಹಾಗೂ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಲ್ಲಿ ಸಿವಿಲ್/ವಿದ್ಯುತ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು/ತಾಂತ್ರಿಕ ಸಿಬ್ಬಂದಿ/ಶಾಖಾಧಿಕಾರಿಗಳು/ಸಹಾಯಕ/ಕಿರಿಯ ಇಂಜಿನಿಯರಿಂಗ್ ಸಿಬ್ಬಂದಿಗಳ ಅನುಪಸ್ಥಿತಿಯಲ್ಲಿ – ಶ್ರೀ ಎಸ್. ವಿ. ಲೋಕೇಶ್ ಇವರು ಕಾರ್ಯಪಾಲಕ ಅಭಿಯಂತರರ ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂದು ಉಲ್ಲೇಖ (2) ರಲ್ಲಿ ಮನವಿ ಮಾಡಿಕೊಂಡಿರುವುದರಿಂದ ಸದರಿಯವರನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿ ಶ್ರೀಯುತರ ಸೇವೆಯನ್ನು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸುವ ಕುರಿತು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

### :: ನಿರ್ಣಯ ::

ಶ್ರೀ ಎಸ್. ವಿ. ಲೋಕೇಶ್, ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ದಿನಾಂಕ:31.12.2025 ರಂದು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಿ ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಲು ಸಭೆಯು ನಿರ್ಣಯಿಸಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.02(g)/(12/25) |

# –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಅಭಿಯಂತರ (ವಿದ್ಯುತ್) ರನ್ನು ಹಂಗಾಮಿಯಾಗಿ ನೇಮಕ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಸರ್ಕಾರದ ಲೋಕೋಪಯೋಗಿ (PWD) ಇಲಾಖೆಯ ನಿಯಮಗಳನುಸಾರ ಡಿವಿಜನ್ ಮಟ್ಟದ ಇಂಜಿನಿಯರಿಂಗ್ ವಿಭಾಗ ಕಾರ್ಯನಿರ್ವಹಿಸುತ್ತಿದೆ. ವಿಶ್ವವಿದ್ಯಾನಿಯದ ಇಂಜಿನಿಯರಿಂಗ್ ವಿಭಾಗಕ್ಕೆ ಕಾರ್ಯಪಾಲಕ/ಸಹಾಯಕ ಕಾರ್ಯಪಾಲಕ/ಸಹಾಯಕ/ ಕಿರಿಯ ಅಭಿಯಂತರರು (ಸಿವಿಲ್/ವಿದ್ಯುತ್) ಮತ್ತು "ಡಿ" ದರ್ಜೆಯ ತಾಂತ್ರಿಕ ಸಿಬ್ಬಂದಿ ಹಾಗೂ ಇಂಜಿನಿಯರಿಂಗ್ ವಿಭಾಗಕ್ಕೆ ಸೀಮಿತರಾದ Accounts Superintendent, Gazetted Manager ಇತ್ಯಾದಿ ಹುದ್ದೆಯನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರಕ್ಕೆ ಆಗಾಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರೂ ಸಹ ಕಾರ್ಯಪಾಲಕ ಅಭಿಯಂತರರ (ಸಿವಿಲ್) ಹುದ್ದೆಯನ್ನು ಮಾತ್ರ ಸರ್ಕಾರವು ಮಂಜೂರು ಮಾಡಿರುತ್ತದೆ. ಈ ಹುದ್ದೆಯನ್ನು ಸರ್ಕಾರದ ಲೋಕೋಪಯೋಗಿ ಇಲಾಖೆಯ ವತಿಯಿಂದ ನಿಯೋಜನೆಯ ಮೇರೆಗೆ ನೇಮಕ ಮಾಡಲಾಗುತ್ತಿದೆ.

1) ವಿಶ್ವವಿದ್ಯಾನಿಲಯದ ನೇರ ಆಡಳಿತ ವ್ಯವಸ್ಥೆಯಲ್ಲಿರುವ ಹಾಸ್ಟೆಲ್‌ಗಳು, ವಿವಿಧ ಮುಖ್ಯ ಕಾರ್ಯಾಲಯಗಳು ಮತ್ತು ಅಧೀನ ಕಾರ್ಯಾಲಯಗಳು, ಒಟ್ಟು 05(ಐದು) ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ 05 ಕೇಂದ್ರಗಳಲ್ಲಿನ ವಿದ್ಯುತ್ ಕಾಮಗಾರಿ ಮತ್ತು ನಿರ್ವಹಣೆಯ ಉಸ್ತುವಾರಿಯನ್ನು ನಿರ್ವಹಿಸಲು ಸಹಾಯಕ ಅಭಿಯಂತರರು (ವಿದ್ಯುತ್) ಇವರುಗಳ ಅವಶ್ಯಕತೆಯಿದೆ. ಎಲ್ಲಾ ಕೇಂದ್ರಗಳಲ್ಲಿಯೂ ದಿನದ 24 ಗಂಟೆಯೂ ವಿದ್ಯುತ್ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ನಿರಂತರವಾಗಿ ಸರಬರಾಜು ಮಾಡಬೇಕಾಗುತ್ತದೆ.

ಬೆಸ್ಕಾಂ ಇಲಾಖೆಯ ನಿಯಮಾನುಸಾರ ರಾಜ್ಯದ ವಿಶ್ವವಿದ್ಯಾನಿಲಯಗಳು ಬೃಹತ್ ವಿದ್ಯುತ್ ಗ್ರಾಹಕರೆಂದು ಪರಿಗಣಿಸಲಾಗಿದೆ. ಆದುದರಿಂದ ವಿಶ್ವವಿದ್ಯಾನಿಲಯಗಳು ಸ್ವತಂತ್ರವಾದ ವಿದ್ಯುತ್ ಪರಿವರ್ತಕಾ ಮತ್ತು ಪ್ರಸರಣಾ ಕೇಂದ್ರಗಳನ್ನು ಸ್ಥಾಪನೆ ಮಾಡಿಕೊಂಡು ಅರ್ಹ ವಿದ್ಯುತ್ ಇಂಜಿನಿಯರ್ ಮೂಲಕ ವಿದ್ಯುತ್ ಕೇಂದ್ರಗಳ ನಿರ್ವಹಣೆ ಮತ್ತು ಸರಬರಾಜು ವ್ಯವಸ್ಥೆಗಳನ್ನು ನಿರ್ವಹಿಸಬೇಕಾಗುತ್ತದೆ. ಅಲ್ಲದೆ, ನಿರ್ವಹಣೆಗೆ ಸಂಬಂಧಿಸಿದಂತೆ ಆಗಾಗ್ಗೆ ಅವಶ್ಯವಿರುವ ವಿದ್ಯುತ್ ಸಾಮಾಗ್ರಿಗಳನ್ನು ಖರೀದಿಸುವ ಸಂದರ್ಭಗಳಲ್ಲಿ ಅವುಗಳ ಗುಣಮಟ್ಟ, ದರಗಳು ಹಾಗೂ ಅವಶ್ಯಕತೆಗಳ ಬಗ್ಗೆ ದೃಢೀಕರಿಸಲು ವಿದ್ಯಾರ್ಹತೆಯೊಂದಿಗೆ ಅನುಭವವಿರುವ ವಿದ್ಯುತ್ ಸಹಾಯಕ ಅಭಿಯಂತರರನ್ನು ನೇಮಿಸಿಕೊಳ್ಳಬೇಕಿರುತ್ತದೆ.

ಕರ್ನಾಟಕ ಸರ್ಕಾರದ, ದಾವಣಗೆರೆ ವಲಯದ ವಿದ್ಯುತ್ ಪರಿವೀಕ್ಷಣಾ ನಿರೀಕ್ಷಕರು, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ 11/33 KVA ವಿದ್ಯುತ್ ಸ್ಥಾವರವನ್ನು ಆಗಾಗ್ಗೆ ಪರಿವೀಕ್ಷಿಸಲು ಆಗಮಿಸುತ್ತಿರುತ್ತಾರೆ. ಈ ಸ್ಥಾವರವನ್ನು ತಪಾಸಣೆ (Inspection) ಮಾಡುವ ಸಂದರ್ಭಗಳಲ್ಲಿ ವಿದ್ಯುತ್ ಕೇಂದ್ರಗಳ ನಿರ್ವಹಣೆಯಲ್ಲಿ ಅನುಭವ ಇರುವ ಅರ್ಹ ವಿದ್ಯಾಭ್ಯಾಸವುಳ್ಳ ವಿದ್ಯುತ್ ಅಭಿಯಂತರರನ್ನು ನೇಮಕ ಮಾಡುವ ಬಗ್ಗೆ ಸೂಚನೆ ನೀಡಿರುತ್ತಾರೆ. ಅಲ್ಲದೆ, ವಿದ್ಯುತ್ ಕೇಂದ್ರಗಳ (ಸ್ಥಾವರಗಳ) ನಿರ್ವಹಣೆಯನ್ನು ಮಾಡುವ ಬಗ್ಗೆ ಅವಶ್ಯವಿರುವ ಮಾರ್ಗಸೂಚಿಯನ್ನು ಸಹ ನೀಡಿರುತ್ತಾರೆ. ಸರ್ಕಾರದ ವಿದ್ಯುತ್ ಪರಿವೀಕ್ಷಣಾ ನಿರೀಕ್ಷಕರು ವಿಶ್ವವಿದ್ಯಾನಿಲಯದ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಅರ್ಹ ಹಾಗೂ ಅನುಭವ ಇರುವ ವಿದ್ಯುತ್ ಅಭಿಯಂತರರು ಕಡ್ಡಾಯವಾಗಿ ಉಪಸ್ಥಿತರಿರಬೇಕೆಂದು ಸಹ ಸೂಚಿಸಿರುತ್ತಾರೆ.

**ಮುಂದುವರೆದಿದೆ...**

ಕುಲಸಚಿವರು                ಕುಲಪತಿಗಳು

2) ಅಲ್ಲದೆ, ರಾಜ್ಯ ಸರ್ಕಾರದ ಲೆಕ್ಕ ಪರಿಶೋಧನಾ ಇಲಾಖೆಯ ಅಧಿಕಾರಿಗಳ ಸಹ ವಿದ್ಯುತ್ ಸಾಮಾಗ್ರಿಗಳನ್ನು ಖರೀದಿಸುವ ಸಂದರ್ಭದಲ್ಲಿ ಅರ್ಹ ವಿದ್ಯುತ್ ಅಭಿಯಂತರರಿಂದ ದರಪಟ್ಟಿಗಳನ್ನು ಸಿದ್ಧಪಡಿಸಿ ಬಿಲ್ಲುಗಳಿಗೆ ಸಹಿ ಮಾಡಿ ದೃಢೀಕರಿಸಬೇಕಾಗುತ್ತದೆ ಎಂದು ತಿಳಿಸುತ್ತಾ, ಸಂಬಂಧಪಟ್ಟ ಬಿಲ್ಲುಗಳ ಪಾವತಿಗಳಿಗೆ ಆಕ್ಷೇಪಣೆಯನ್ನು ತಿಳಿಸಿರುತ್ತಾರೆ.

ವಿಶ್ವವಿದ್ಯಾನಿಲಯದ ಎಲ್ಲಾ ಕೇಂದ್ರಗಳ ಕಾರ್ಯಾಲಯಗಳಲ್ಲಿನ ವಿದ್ಯುತ್ ಪರಿವರ್ತಕಗಳ ಮತ್ತು ಪರಿಕರಗಳ ಉಸ್ತುವಾರಿ, ವಿದ್ಯುತ್ ಸರಬರಾಜು ನಿರ್ವಹಣೆ ಹಾಗೂ ವಿವಿಧ ಕಾರ್ಯಾಲಯಗಳಲ್ಲಿರುವ ವಿದ್ಯುತ್ ಪರಿಕರಗಳ ನಿರ್ವಹಣೆಯ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಸರ್ಕಾರದ ವಿದ್ಯುತ್ ನೀರಿಕ್ಷಕರ ಮತ್ತು ಮೇಲ್ವಿಚಾರಕರ ಸೂಚನೆ ಹಾಗೂ ಸದರಿ ಇಲಾಖೆಯ ನಿಯಮಗಳನುಸಾರ ನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ವಿದ್ಯುತ್ ಕೇಂದ್ರದಲ್ಲಿ ಯಾವುದೇ ರೀತಿ ಅವಘಡಗಳ ಸಂಭವಿಸಿದಾಗ ಕಾನೂನು ರಿತ್ಯಾ ಕ್ರಮ ಜರುಗಿಸಲಾಗುವುದು ಎಂಬುದನ್ನು ಸಹ ತಿಳಿಸಿರುತ್ತಾರೆ. ವಿಶ್ವವಿದ್ಯಾನಿಲಯದ 11/33 KVA ವಿದ್ಯುತ್ ಸ್ಥಾವರದ ಕಾರ್ಯನಿರ್ವಹಣೆಯನ್ನು ಅತ್ಯಂತ ಜವಾಬ್ದಾರಿಯುತವಾಗಿ ಮತ್ತು ಜಾಗರೂಕತೆಯಿಂದ ನಿರ್ವಹಿಸುವ ಬಗ್ಗೆ ಸದರಿ ಇಲಾಖೆಯ ಮಾರ್ಗಸೂಚಿಗಳನ್ನು ಸಹ ನೀಡಿರುತ್ತಾರೆ. ಆದುದರಿಂದ, ವಿದ್ಯುತ್ ಸ್ಥಾವರದ ಕಾರ್ಯನಿರ್ವಹಣೆ ಮತ್ತು ಆಂತರಿಕ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನು ಪ್ರಯೋಗಾಲಯಗಳಲ್ಲಿ ಸ್ಥಾಪಿಸಿರುವ ವಿವಿಧ ವಿದ್ಯುತ್ ಉಪಕರಣಗಳ ಉಸ್ತುವಾರಿಯನ್ನು ಅಗತ್ಯ ಸೇವೆಯೆಂದು ಪರಿಗಣಿಸಿ, B.E (Electrical & Electronics) ವಿದ್ಯಾರ್ಹತೆಯ ವಿದ್ಯುತ್ ಅಭಿಯಂತರರವರನ್ನು ಹಂಗಾಮಿಯಾಗಿ ತತ್ಸಮಾನ ಹುದ್ದೆಗೆದುರಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಅಭಿಯಂತರರು (ವಿದ್ಯುತ್) ಖಾಯಂ ಹುದ್ದೆಯು ಇಲ್ಲದೇ ಇರುವುದರಿಂದ ಹಾಗೂ ವಿಶ್ವವಿದ್ಯಾನಿಲಯದ ವಿದ್ಯುತ್ ಸ್ಥಾವರದ ಕಾರ್ಯನಿರ್ವಹಣೆ ಮತ್ತು ಆಂತರಿಕ ವಿದ್ಯುತ್ ಸರಬರಾಜು ವ್ಯವಸ್ಥೆಯು ಅಗತ್ಯ ಸೇವೆಯಾಗಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ಮಂಜೂರಾಗಿ ಖಾಲಿ ಉಳಿದಿರುವ 05 ಅಧೀಕ್ಷಕರ ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯನ್ನಾಗಿ ಪರಿವರ್ತಿಸಿ ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ, ಸರ್ಕಾರದಿಂದ ಇದುವರೆಗೂ ಯಾವುದೇ ಉತ್ತರ ಬರದೇ ಇರುವ ಕಾರಣ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಸಹಾಯಕ ಅಭಿಯಂತರರು (ವಿದ್ಯುತ್) ಹುದ್ದೆಯನ್ನು B.E (Electrical & Electronics) ವಿದ್ಯಾರ್ಹತೆಯ ವಿದ್ಯುತ್ ಅಭಿಯಂತರರವರನ್ನು ಹಂಗಾಮಿಯಾಗಿ ನೇಮಕ ಮಾಡಿಕೊಳ್ಳಲು ಪತ್ರಿಕಾ ಪ್ರಕಟಣೆ ಹೊರಡಿಸಿ, ಅರ್ಜಿ ಆಹ್ವಾನಿಸಿ ವಿಶ್ವವಿದ್ಯಾನಿಲಯದ ಪರಿಣಿತ ಸಮಿತಿ (Expert Committee) ಮೂಲಕ 06 ತಿಂಗಳ ಅವಧಿಗೆ ಹಂಗಾಮಿಯಾಗಿ ನೇಮಕ ಮಾಡಿಕೊಂಡು ಮಾಹೆಯಾನ ರೂ.50,000/- ಗಳ ಗೌರವಧನವನ್ನು ನಿಗಧಿಪಡಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಅಧ್ಯಯನ ಮಂಡಳಿ (ಬಿ.ಓ.ಎಸ್) – 10 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(12/25) |

# –: ಟಿಪ್ಪಣಿ :–

ವಿಷಯ : **B.Sc.(CS) ಮತ್ತು BCA ಸ್ನಾತಕ ಪದವಿಯ 3 ಮತ್ತು 4ನೇ ಸೆಮಿಸ್ಟರಗಳ ಅಧ್ಯಯನ ಮಂಡಳಿ ಸಭೆ ನಡಾವಳಿಯನ್ನು ಅನುಮೋದಿಸುವ ಬಗ್ಗೆ.**

ಉಲ್ಲೇಖ : 1. ಅಧ್ಯಕ್ಷರು, ದಾವಿವಿ ಇವರ ಪತ್ರ ಸಂಖ್ಯೆಃ ದಾವಿವಿ/ಗವಿ/2025–26/2089 ದಿನಾಂಕಃ18.11.2025

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 19.11.2025

******

ವಿಶ್ವವಿದ್ಯಾನಿಲಯದ 2025–26ನೇ ಸಾಲಿನ B.Sc.(CS) ಮತ್ತು BCA ಸ್ನಾತಕ ಪದವಿಯ 3 ಮತ್ತು 4ನೇ ಸೆಮಿಸ್ಟರ್‌ಗಳಿಗೆ ಸಂಬಂಧಿಸಿದಂತೆ ದಿನಾಂಕ:18.11.2025 ರಂದು ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ಮಂಡಳಿ ಸಭೆಯನ್ನು ನಡೆಸಿ ಕೆಲವೊಂದು ಮಾರ್ಪಾಡುಗಳೊಂದಿಗೆ ಸಭೆಯ ನಡಾವಳಿಯನ್ನು ಹಾಗೂ Curriculum Structure ನ್ನು ಸಲ್ಲಿಸಿರುತ್ತಾರೆ. ಉಲ್ಲೇಖ–2 ರ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಸದರಿ ನಡಾವಳಿ ಮತ್ತು Curriculum Structure ನ್ನು ಪರೀಕ್ಷಾಂಗ ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದ್ದು, ಮುಂಬರುವ ನಿಕಾಯಗಳ ಘಟನೋತ್ತರ ಅನುಮೋದನೆ ಕಾಯ್ದಿರಿಸಿ ಕ್ರಮವಹಿಸಲಾಗಿರುತ್ತದೆ ಹಾಗೂ ದಿನಾಂಕ:09.12.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಈಗ ಸದರಿ ವಿಷಯವನ್ನು ದಿನಾಂಕ:30.12.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ದಿನಾಂಕ:18.11.2025 ರ ಅಧ್ಯಯನ ಮಂಡಳಿ ಸಭೆಯ ನಡಾವಳಿ ಹಾಗೂ Curriculum Structure ನ್ನು ಮುಂಬರುವ ನಿಕಾಯಗಳ ಘಟನೋತ್ತರ ಅನುಮೋದನೆ ಕಾಯ್ದಿರಿಸಿ ಕ್ರಮವಹಿಸಲಾಗಿರುವುದಕ್ಕೆ ಸದರಿ ನಡಾವಳಿ ಹಾಗೂ Curriculum Structure ನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ (ಬಿ.ಓ.ಎಸ್) – 11 | |
|---|---|
| ವಿಷಯ ಸಂಖ್ಯೆ: | ಸಿಂ.03(b)/(12/25) |

## –: ಟಿಪ್ಪಣಿ :–

ವಿಷಯ : **2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಎಸ್ಸಿ ಡೇಟಾ ಸೈನ್ಸ್ ಪದವಿಯನ್ನು ಸ್ನಾತಕ ಪದವಿ ಕಾಲೇಜುಗಳಲ್ಲಿ ಪ್ರಾರಂಭಿಸುವ ಕುರಿತು..**

******

2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿ ಕಾಲೇಜುಗಳಲ್ಲಿ ಬಿ.ಎಸ್ಸಿ ಡೇಟಾ ಸೈನ್ಸ್ ವಿಷಯನ್ನು ಪರಿಚಲಿಸುವ ಕುರಿತಂತೆ ದಿನಾಂಕ:13.05.2025 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯದ ಪಠ್ಯಕ್ರಮ ರಚಿಸಲು ಅಧ್ಯಯನ ಮಂಡಳಿ ರಚಿಸಲಾಗಿದ್ದು, ಅಧ್ಯಕ್ಷರು ದಿನಾಂಕ:26.11.2025 ರಂದು 1 ರಿಂದ 4ನೇ ಸೆಮಿಸ್ಟರ್ Course Structure ಹಾಗೂ 1 ಮತ್ತು 2ನೇ ಸೆಮಿಸ್ಟರ್‌ನ ಪಠ್ಯಕ್ರಮಗಳನ್ನು ಅಧ್ಯಯನ ಮಂಡಳಿ ಸಭೆಯ ಅನುಮೋದನೆಯೊಂದಿಗೆ ಸಲ್ಲಿಸಿರುತ್ತಾರೆ. ಮುಂಬರುವ ಶೈಕ್ಷಣಿಕ ಸಾಲಿನಿಂದ ಬಿ.ಎಸ್ಸಿ ಡೆಟಾ ಸೈನ್ಸ್ ವಿಷಯವನ್ನು ಪರಿಚಲಿಸಲು ದಿನಾಂಕ:09.12.2025ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಈಗ ಸದರಿ ವಿಷಯವನ್ನು ದಿನಾಂಕ:30.12.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ ಪದವಿ ಕಾಲೇಜುಗಳಲ್ಲಿ **2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಎಸ್ಸಿ ಡೇಟಾ ಸೈನ್ಸ್ (B.Sc. Data Science)** ಕೋರ್ಸನ್ನು ನಿಯಮಾನುಸಾರ ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(12/25) |

# –: ಟಿಪ್ಪಣಿ :–

ವಿಷಯ : **2025–26ನೇ ಶೈಕ್ಷಣಿಕ ಸಾಲಿನ ಸ್ನಾತಕ ಬಿ.ಇಡಿ ಪದವಿಯ ಪ್ರವೇಶಾತಿ ಶುಲ್ಕ ಕುರಿತು.**

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:19.11.2025

******

ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಇಡಿ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ, 2025–26ನೇ ಶೈಕ್ಷಣಿಕ ಸಾಲಿನ ಬಿ.ಇಡಿ ಪದವಿ ಪ್ರವೇಶಾತಿ ಶುಲ್ಕವನ್ನು ಶೇ.10% ರಷ್ಟು ಹೆಚ್ಚಿಸಿ ಶುಲ್ಕದ ಮೊತ್ತವನ್ನು ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವಂತೆ Round off to next Rs,10/- ಗೆ ಮಾಡಿ ಸರಿದೂಗಿಸಲಾಗಿರುತ್ತದೆ. ಈ ಕುರಿತು ಸದರಿ ವಿಷಯವನ್ನು ದಿನಾಂಕ:09.12.2025 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಈಗ ಸದರಿ ವಿಷಯನ್ನು ದಿನಾಂಕ:30.12.2025ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**:2025–26ನೇ ಸಾಲಿನ ಬಿ.ಇಡಿ. ಶುಲ್ಕದ ವಿವರ:**

| Sl. No. | Particulars | Fees Details | |
|---|---|---|---|
| | | 1st Year | 2nd Year |
| 01 | Admission Fee (University) | 2200 | 2200 |
| 02 | Registration | 1100 | - |
| 03 | University Development Fund | 2840 | 2840 |
| 04 | Sports Development Fund | 585 | 585 |
| 05 | ECA | 585 | 585 |
| 06 | Career Guidance Fund | 66 | 66 |
| 07 | Rovers & Rangers (Scouts & Guides) | 55 | 55 |
| 08 | Poor Student Fund | 44 | 44 |
| 09 | Gymkhana Fee | 605 | 605 |
| | **TOTAL** | **8080** | **6980** |

| | | |
|---|---|---|
| 01 | Within State University Fees ( Migration Fee) | **950** |
| 02 | Out of State University Fees | **3720** |

**NOTE (1):** The following fees to be collected by the concerned Colleges & shall be utilized for the Purpose for which it is collected.

| Sl. No. | Particulars | Total |
|---|---|---|
| 1 | Sport Development Fee | 95 |
| 2 | ECA | 95 |
| 3 | Red Cross | 95 |
| 4 | Skill Development | 183 |
| | **TOTAL** | **468** |

**NOTE (2):**

1. The CONVOCATION FEES will be collected in Examination Branch as prescribed by the University.
2. The Registration Fee for ADD-ON Courses offered by the Colleges fees shall be collected Rs.407/-

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಇಡಿ ಪ್ರವೇಶಾತಿ ಶುಲ್ಕವನ್ನು 2025–26ನೇ ಶೈಕ್ಷಣಿಕ ಸಾಲಿಗೆ ಶೇ.10% ರಷ್ಟು ಹೆಚ್ಚಿಸಿ ಶುಲ್ಕದ ಮೊತ್ತವನ್ನು Round off to next Rs,10/- ಗೆ ಮಾಡಿ ಸರಿದೂಗಿಸಲಾಗಿರುವ ಈ ಮೇಲ್ಕಂಡ ಕೋಷ್ಟಕವನ್ನು ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.04(b)/(12/25) |

## –: ಟಿಪ್ಪಣಿ :–

**ವಿಷಯ : "ಸಂಕಲ್ಪ IAS/KAS" ತರಬೇತಿ ಕೇಂದ್ರದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿನ Art Gallery ಕಟ್ಟಡದ ಎರಡನೇ ಮಹಡಿಯಲ್ಲಿ ಪ್ರಾರಂಭಿಸಿರುವ "ಸಂಕಲ್ಪ IAS/KAS" ತರಬೇತಿ ಕೇಂದ್ರದೊಂದಿಗೆ ಷರತ್ತು ಮತ್ತು ನಿಬಂಧನೆಗಳನ್ನೊಳಗೊಂಡು ನಿಯಮಾನುಸಾರ ಕರಾರು ಒಪ್ಪಂದ ಮಾಡಿಕೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ದೃಶ್ಯಕಲಾ ಮಹಾವಿದ್ಯಾಲಯದ ಕಟ್ಟಡದಲ್ಲಿ ಹೊಸದಾಗಿ ಪ್ರಾರಂಭಿಸಲಾಗಿರುವ "ಸಂಕಲ್ಪ IAS/KAS" ತರಬೇತಿ ಕೇಂದ್ರದೊಂದಿಗೆ ಒಪ್ಪಂದ (MoU) ಮಾಡಿಕೊಳ್ಳಲು ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಅದರಂತೆ ಕ್ರಮವಹಿಸಲು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನೊಳಗೊಂಡಂತೆ ನಿಯಮಾನುಸಾರ ಕರಾರು ಒಪ್ಪಂದ (MoU) ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಮುಂದುವರೆದು, ಸಾರ್ವಜನಿಕ ಗ್ರಂಥಾಲಯದವರ ಜೊತೆ ಒಪ್ಪಂದ ಮಾಡಿಕೊಂಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 14 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(12/25) |

# –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ 2026–27ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳಿಂದ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸುವ ಕುರಿತು.**

ಉಲ್ಲೇಖ :
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್‌ಇ 2024, ದಿನಾಂಕ:23.10.2025
2. ವಿಶ್ವವಿದ್ಯಾನಿಲಯ ಡೀನರ ಸಮಿತಿ ನಿರ್ಣಯ ದಿನಾಂಕ:06.11.2025
3. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ ಸಂಯೋ–155/2025–26/3276 ದಿನಾಂಕ:07.11.2025
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.11.2025

******

ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿನ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ, ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಪದವಿ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಂತಹ ಕಾಲೇಜುಗಳನ್ನು ರಾಜ್ಯ ಸರ್ಕಾರದ/ವಿಶ್ವವಿದ್ಯಾನಿಲಯದ ಅನುದಾನದ ಅಪೇಕ್ಷೆ ಇಲ್ಲದೆ ಕಾಲೇಜುಗಳನ್ನು ನಡೆಸಲು ಆರ್ಥಿಕ ಸಾಮರ್ಥ್ಯವುಳ್ಳ ನೊಂದಾಯಿತ ಸೊಸೈಟಿ, ಸಾರ್ವಜನಿಕ ಟ್ರಸ್ಟ್/ಸಂಸ್ಥೆಗಳಿಂದ ನವೀನ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಲ್ಲದೇ ಪ್ರಸ್ತುತ ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಎಲ್ಲಾ ಸಂಯೋಜಿತ ಕಾಲೇಜುಗಳಿಂದಲೂ, 2026–27ನೇ ಶೈಕ್ಷಣಿಕ ಸಾಲಿಗಾಗಿ ತಮ್ಮ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳ ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತತ್ಸಂಬಂಧ, ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿನ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ, ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಪದವಿ ಕಾಲೇಜುಗಳನ್ನು ರಾಜ್ಯ ಸರ್ಕಾರದ/ವಿಶ್ವವಿದ್ಯಾನಿಲಯದ ಅನುದಾನದ ಅಪೇಕ್ಷೆ ಇಲ್ಲದೆ ಕಾಲೇಜುಗಳನ್ನು ನಡೆಸಲು ಆರ್ಥಿಕ ಸಾಮರ್ಥ್ಯವುಳ್ಳ ನೊಂದಾಯಿತ ಸೊಸೈಟಿ, ಸಾರ್ವಜನಿಕ ಟ್ರಸ್ಟ್/ಸಂಸ್ಥೆಗಳಿಂದ ನವೀನ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಿರುವುದಕ್ಕೆ ಹಾಗೂ ಪ್ರಸ್ತುತ ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಎಲ್ಲಾ ಸಂಯೋಜಿತ ಕಾಲೇಜುಗಳಿಂದಲೂ, 2026–27ನೇ ಶೈಕ್ಷಣಿಕ ಸಾಲಿಗಾಗಿ ತಮ್ಮ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿಗಳ ಪ್ರವೇಶ ಮಿತಿ ಹೆಚ್ಚಳ ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

| | |
|---|---|
| ಕುಲಸಚಿವರು | ಕುಲಪತಿಗಳು |

| ಕಾಲೇಜು ಅಭಿವೃದ್ಧಿ ಪರಿಷತ್ತು – 15 | |
|---|---|
| ವಿಷಯ ಸಂಖ್ಯೆ: | ಸಿಂ.05(b)/(12/25) |

## –: ಟಿಪ್ಪಣಿ :–

ವಿಷಯ : **2026–27ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಭೌತಿಕ ಪರಿಶೀಲನೆಗೆ ಸ್ಥಳೀಯ ತಪಾಸಣಾ ಸಮಿತಿಗಳನ್ನು ರಚಿಸಿಸುವುದಕ್ಕೆ ಹಾಗೂ ದಿನಭತ್ಯೆ ಮೊತ್ತವನ್ನು ನಿಗದಿಪಡಿಸಿ ಅನುಮೋದಿಸುವ ಕುರಿತು.**

ಉಲ್ಲೇಖ :
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:23.10.2025
2. ವಿಶ್ವವಿದ್ಯಾನಿಲಯ ಡೀನರ ಸಮಿತಿ ನಿರ್ಣಯ ದಿನಾಂಕ:06.11.2025
3. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–155/2025–26/3276 ದಿನಾಂಕ:07.11.2025

******

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಉಲ್ಲೇಖಿತ (3)ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ತಮ್ಮ ಕಾಲೇಜಿನ 2026–27ನೇ ಶೈಕ್ಷಣಿಕ ಸಾಲಿನ ನವೀನ ಸಂಯೋಜನೆ/ ಮುಂದುವರಿಕೆ ಸಂಯೋಜನೆ/ನವೀನ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ನವೀನ ಐಚ್ಛಿಕ ವಿಷಯ ಇತ್ಯಾದಿಗಳ ಸಂಯೋಜನೆಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಸದರಿ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಬೋಧಕರನ್ನೊಳಗೊಂಡಂತೆ ಸಮಿತಿಗಳನ್ನು ರಚಿಸಲಾಗುತ್ತದೆ.

ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗುವ ಅಧ್ಯಕ್ಷರು/ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಪಾವತಿಸಲಾಗುವ ಗೌರವ ಸಂಭಾವನೆಯನ್ನು ಕೆಳಕಂಡಂತೆ ನಿಗದಿಪಡಿಸಿ ಅನುಮೋದಿಸುವಂತೆ ಕೋರಲಾಗಿದೆ.

**ಅನುಬಂಧ – 1**

| ಕ್ರ.ಸಂ. | ವಿವರ | 2026–27ನೇ ಸಾಲಿಗೆ ಅನ್ವಯವಾಗುವಂತೆ |
|---|---|---|
| 01 | ಅಧ್ಯಕ್ಷರು (ಬಾಹ್ಯ ಸದಸ್ಯರುಗಳನ್ನೊಳಗೊಂಡಂತೆ) | ರೂ.1800/– |
| 02 | ಸದಸ್ಯರು | ರೂ.1500/– |
| 03 | ಬಾಹ್ಯ ಸದಸ್ಯರಿಗೆ ಕಾರು ಮೈಲೇಜು ದರ ಪ್ರತಿ ಕಿ.ಮಿ.ಗೆ (ಉಪಸ್ಥಿತ ಭತ್ಯೆ ಇರುವುದಿಲ್ಲ) | ರೂ.10/– |

ತತ್ಸಂಬಂಧ, ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಎಲ್ಲಾ ಸಂಯೋಜಿತ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಬೋಧಕರನ್ನೊಳಗೊಂಡಂತೆ ಸಮಿತಿಗಳನ್ನು ರಚಿಸಿರುವುದಕ್ಕೆ ಹಾಗೂ ಸದರಿ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಅನುಬಂಧ–1 ರಲ್ಲಿ ನಿಗದಿಪಡಿಸಿರುವ ಗೌರವ ಸಂಭಾವನೆಯನ್ನು ಪಾವತಿಸಲು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 16 | |
|---|---|
| ವಿಷಯ ಸಂಖ್ಯೆ: | ಸಿ.05(c)/(12/25) |

## –: ಟಿಪ್ಪಣಿ :–

ವಿಷಯ : **2026–27ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಭೌತಿಕ ಪರಿಶೀಲನೆಗೆ ರಚಿಸಲಾಗಿರುವ ಸ್ಥಳೀಯ ತಪಾಸಣಾ ಸಮಿತಿಗಳನ್ನು ಅನುಮೋದಿಸುವ ಕುರಿತು.**

ಉಲ್ಲೇಖ : 1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:23.10.2025

2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–155/2025–26/3276 ದಿನಾಂಕ:07.11.2025

******

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಉಲ್ಲೇಖಿತ (2)ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತತ್ಸಂಬಂಧವಾಗಿ, ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಭೋಧಕರನ್ನೊಳಗೊಂಡಂತೆ ರಚಿಸಲಾಗಿರುವ ಸಮಿತಿಗಳನ್ನು ಅನುಮೋದಿಸುವ ಬಗ್ಗೆ ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಎಲ್ಲಾ ಸಂಯೋಜಿತ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಬೋಧಕರನ್ನೊಳಗೊಂಡಂತೆ ರಚಿಸಲಾಗಿರುವ ಸಮಿತಿಗಳನ್ನು ಪರಿಶೀಲಿಸಿದ ನಂತರ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 17 | |
|---|---|
| ವಿಷಯ ಸಂಖ್ಯೆ: | ಸಿಂ.05(d)/(12/25) |

# –: ಟಿಪ್ಪಣಿ :–

**ವಿಷಯ : 2026–27ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸಂಯೋಜನಾ ಕಾರ್ಯವನ್ನು ಸ್ಥಳೀಯ ತಪಾಸಣಾ ಸಮಿತಿಗಳು ಶಿಫಾರಸ್ಸು ಮಾಡಿ ನೀಡಿರುವ ಪರಿಶೀಲನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವ ಕುರಿತು.**

ಉಲ್ಲೇಖ : 1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:23.10.2025

2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ ಸಂಯೋ–155/2025–26/3276 ದಿನಾಂಕ:07.11.2025

******

ಉಲ್ಲೇಖಿತ (1)ರ ಸರ್ಕಾರದ ಆದೇಶಾನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) (02)(03)ರನ್ವಯ, ವಿಶ್ವವಿದ್ಯಾನಿಲಯ ಸಂಲಗ್ನಗೊಂಡ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧ, ನವೀನ ಕಾಲೇಜುಗಳ ಸಂಯೋಜನೆ, ಕಾಲೇಜುಗಳ ಮುಂದುವರಿಕೆ ಸಂಯೋಜನೆ/ನವೀನ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ನವೀನ ಐಚ್ಛಿಕ ವಿಷಯ ಇತ್ಯಾದಿಗಳ ಅರ್ಜಿಗಳನ್ನು ಉಲ್ಲೇಖಿತ (2)ರ ಪತ್ರದಲ್ಲಿ ಆಹ್ವಾನಿಸಲಾಗಿತ್ತು.

ಈ ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ತಮ್ಮ ಕಾಲೇಜಿನ 2026–27ನೇ ಸಾಲಿನ ಮುಂದುವರಿಕೆ/ನವೀನ ಸಂಯೋಜನೆಗಾಗಿ ಸಂಯೋಜನಾ ಅರ್ಜಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)(06) ರನ್ವಯ, ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸದರಿ ಅರ್ಜಿಗಳ ಪರಿಶೀಲನಾ ಕಾರ್ಯಗಳಿಗಾಗಿ ಕಾಲೇಜುಗಳ ಭೌತಿಕ ಪರಿಶೀಲನೆ ನಡೆಸಲು ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿತ್ತು. (ಪ್ರತಿ ಲಗತ್ತಿಸಿದೆ) ಸದರಿ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡಿ ಸಂಯೋಜನಾ ಶಿಫಾರಸ್ಸು ವರದಿಗಳನ್ನು ಸಲ್ಲಿಸಿರುತ್ತವೆ. ಆದ್ದರಿಂದ, ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) (10)ರನ್ವಯ, ಹೊಸ ಕಾಲೇಜು, ಹೊಸ ಕೋರ್ಸು/ಐಚ್ಛಿಕ ವಿಷಯ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣಗಳಿಗೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಉಳಿದಂತೆ, ಮುಂದುವರಿಕೆ ಸಂಯೋಜನೆಗೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಗಳನ್ನು ವಿಶ್ವವಿದ್ಯಾನಿಲಯದ ಹಂತದಲ್ಲಿ ಅನುಮೋದಿಸಬೇಕಾಗಿರುತ್ತದೆ.

ತತ್ಸಂಬಂಧ, ಈ ಮೇಲ್ಕಂಡ ಮಾಹಿತಿ/ವಿವರಗಳನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) (10)ರನ್ವಯ, ಹೊಸ ಕಾಲೇಜು, ಹೊಸ ಕೋರ್ಸು/ಐಚ್ಛಿಕ ವಿಷಯ, ಶಾಶ್ವತ ಸಂಯೋಜನೆ, ಶಾಶ್ವತ ಸಂಯೋಜನೆ ನವೀಕರಣಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಗಳು ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ಮಾಡಿರುವ ವರದಿಗಳನ್ನು ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು ಹಾಗೂ ಮುಂದುವರಿಕೆ ಸಂಯೋಜನೆಗಾಗಿ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಗಳು ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ಮಾಡಿರುವ ವರದಿಗಳನ್ನು ವಿಶ್ವವಿದ್ಯಾನಿಲಯದ ಹಂತದಲ್ಲಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು                                        ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 18 | |
|---|---|
| ವಿಷಯ ಸಂಖ್ಯೆ: | ಸಿಂ.05(e)/(12/25) |

# –ಃ ಟಿಪ್ಪಣಿ ಃ–

ವಿಷಯ : **2026–27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳನ್ನು ಘಟನೋತ್ತರವಾಗಿ ಅನುಮೋದಿಸುವ ಬಗ್ಗೆ.**

ಉಲ್ಲೇಖ : 1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್‌ಇ 2024, ದಿನಾಂಕ:23.10.2025
2. ವಿಶ್ವವಿದ್ಯಾನಿಲಯ ಡೀನರ ಸಮಿತಿ ನಿರ್ಣಯ ದಿನಾಂಕ:06.11.2025
3. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–155/2025–26/3276 ದಿನಾಂಕ:07.11.2025

******

ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಸಂಬಂಧಿಸಿದಂತೆ **ದಿನಾಂಕ:06.11.2025**ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನರ ಸಭೆಯಲ್ಲಿ ಚರ್ಚಿಸಿ ನಿರ್ಣಯದಂತೆ ಈ ಕೆಳಕಂಡ ಅಂಶಗಳ ಕುರಿತು ಕ್ರಮಕೈಗೊಳ್ಳಲಾಗಿದೆ.

1. 2026–27ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ನವೀನ ಸಂಯೋಜನೆ/ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ನವೀನ ಐಚ್ಛಿಕ ವಿಷಯ ಹಾಗೂ ಇತರೇ ಶುಲ್ಕಗಳನ್ನು **2025–26ನೇ** ಶೈಕ್ಷಣಿಕ ಸಾಲಿನಲ್ಲಿರುವ ಸಂಯೋಜನಾ ಶುಲ್ಕಗಳನ್ನು ಹತ್ತಿರದ ರೂ.10/100ಕ್ಕೆ Round off ಮಾಡಿ ಅಳವಡಿಸಿಕೊಳ್ಳಲಾಯಿತು.
2. ಇತರೇ ಶುಲ್ಕಗಳನ್ನು ಪರಿಷ್ಕರಿಸಲು ಹಾಗೂ ಬಿ.ಎ./ಬಿ.ಎಸ್ಸಿ ಪದವಿಗಳಿಗೆ ವಿಷಯ ಸಮೂಹ ಪರಿಗಣಿಸಿದೇ ವಿಭಾಗವಾರು ಒಂದು ವಿಭಾಗಕ್ಕೆ (1 ರಿಂದ 60ರಂತೆ) ಹೆಚ್ಚುವರಿ ವಿಭಾಗಗಳಿಗೆ ಶುಲ್ಕವನ್ನು ಮತ್ತು ಸಂಯೋಜನೆಗೆ ಅರ್ಜಿ ಸಲ್ಲಿಸಿದ ಪ್ರತಿ ಪದವಿಗೆ ಪ್ರತ್ಯೇಕವಾಗಿ ಸೇವಾ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕವನ್ನು ವಿಧಿಸಲು ತೀರ್ಮಾನಿಸಲಾಯಿತು.
3. ಸರ್ಕಾರದ ಆದೇಶದನ್ವಯ, ಸರ್ಕಾರಿ ಕಾಲೇಜುಗಳಿಂದ ಯಾವುದೇ ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳನ್ನು ಪಾವತಿಸಿಕೊಳ್ಳದಿರಲು ಸೂಚಿಸಲಾಗಿರುತ್ತದೆ. ಆದರೆ ವಿಶ್ವವಿದ್ಯಾನಿಲಯದಿಂದ ಸ್ಥಳೀಯ ತಪಾಸಣೆ ಸಮಿತಿಗಳ ಭೇಟಿಯ ವೆಚ್ಚಗಳಿಗಾಗಿ ಸದರಿ ಕಾಲೇಜುಗಳಿಂದ ಅರ್ಜಿ ಶುಲ್ಕದ ರೂಪದಲ್ಲಿ ಕನಿಷ್ಠ ರೂ.5000/–ಗಳನ್ನು ಭರಿಸಿಕೊಳ್ಳುವಂತೆ ಸಭೆಯು ನಿರ್ಧರಿಸಿತು.
4. 2026–27ನೇ ಸಾಲಿಗೆ ವಿವಿಧ ಸಂಯೋಜನ ಶುಲ್ಕಗಳನ್ನು ನಿಗದಿಪಡಿಸಿ ಅದಕ್ಕೆ 18% ಜಿಎಸ್‌ಟಿ ಯನ್ನು ಪ್ರತ್ಯೇಕವಾಗಿ ವಿಧಿಸುವಂತೆ ನಿರ್ಣಯಿಸಿ ಶುಲ್ಕ ತಃಖ್ತೆಯನ್ನು ಹೊರಡಿಸಲಾಯಿತು. (ಪ್ರತಿ ಲಗತ್ತಿಸಿದೆ)

ಮೇಲ್ಕಂಡ ಎಲ್ಲಾ ಅಂಶಗಳೊಂದಿಗೆ 2026–27ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ಶುಲ್ಕ ತಃಖ್ತೆಯನ್ನು ಹಾಗೂ ವಿಧಿಸಲಾಗುವ ಜಿಎಸ್‌ಟಿ ದರಗಳ ಬಗ್ಗೆ ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳಿಗೆ ಸಂಬಂಧಿಸಿದಂತೆ ಈ ಮೇಲ್ಕಂಡ 4 ಅಂಶಗಳನ್ನು ಒಳಗೊಂಡು ಸಿದ್ಧಪಡಿಸಲಾಗಿರುವ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಶುಲ್ಕ ತಃಖ್ತೆಯನ್ನು ಹಾಗೂ ವಿಧಿಸಲಾಗುವ ಜಿ.ಎಸ್.ಟಿ. ದರಗಳ ಕುರಿತು ಚರ್ಚಿಸಿದ ಬಳಿಕ ಕೈಗೊಂಡ ಕ್ರಮಗಳಿಗೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(12/25) |

## –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸುವ ಕುರಿತು.**

******

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ರ ಸೆಕ್ಷನ್ 40(1) (ಸಿ) ಮತ್ತು (ಡಿ) ರನ್ವಯ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಲ್ಲಿ/ ವಿಶ್ವವಿದ್ಯಾನಿಲಯದಲ್ಲಿ 2024–25ನೇ ಸಾಲಿನಲ್ಲಿ ಜರುಗಿದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ, ರ್‍ಯಾಂಕ್ ಪ್ರಮಾಣ ಪತ್ರ, ಚಿನ್ನದ ಪದಕ ಇತ್ಯಾದಿಗಳನ್ನು ಪ್ರಧಾನ ಮಾಡಬೇಕಾಗಿರುತ್ತದೆ. ಆದುದರಿಂದ, ವಿಶ್ವವಿದ್ಯಾನಿಲಯದ 13ನೇ ಘಟಿಕೋತ್ಸವ ಸಮಾರಂಭವನ್ನು ಜನವರಿ/ ಫೆಬ್ರವರಿ–2026ರ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ.

ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ 2024–25ನೇ ಸಾಲಿನಲ್ಲಿ ಜರುಗಿದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ, ರ್‍ಯಾಂಕ್ ಪ್ರಮಾಣ ಪತ್ರ, ಚಿನ್ನದ ಪದಕ ಇತ್ಯಾದಿಗಳನ್ನು ಪ್ರಧಾನ ಮಾಡಲು ಮಾನ್ಯ ರಾಜ್ಯಪಾಲರ ಆದೇಶಾನುಸಾರ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ದಿನಾಂಕ:30.01.2026ರಂದು ಮಧ್ಯಾಹ್ನ:12.00ಕ್ಕೆ ಏರ್ಪಡಿಸುವುದಕ್ಕೆ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 20 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(12/25) |

## –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದಲ್ಲಿ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಪೆಂಡಾಲ್ ವ್ಯವಸ್ಥೆ ಮಾಡಲು ಇ–ಟೆಂಡರ್ ಆಹ್ವಾನಿಸುವ ಕುರಿತು.**

******

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ, ಈ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಿರ್ವಹಿಸಲು ಪೆಂಡಾಲ್, ಆಸನಗಳ ವ್ಯವಸ್ಥೆ, ಲೈಟಿಂಗ್ ವ್ಯವಸ್ಥೆ, ಸೌಂಡ್ ಸಿಸ್ಟಂ ವ್ಯವಸ್ಥೆ ಇತ್ಯಾದಿಗಳನ್ನು ವ್ಯವಸ್ಥೆ ಮಾಡುವ ಸಲುವಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ ಕ್ರಮಕೈಗೊಳ್ಳಬೇಕಾಗಿರುತ್ತದೆ ತತ್ಸಬಂಧವಾಗಿ, ಈ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ ಈ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಿರ್ವಹಿಸಲು ಪೆಂಡಾಲ್, ಆಸನಗಳ ವ್ಯವಸ್ಥೆ, ಲೈಟಿಂಗ್ ವ್ಯವಸ್ಥೆ, ಸೌಂಡ್ ಸಿಸ್ಟಂ ವ್ಯವಸ್ಥೆ ಇತ್ಯಾದಿಗಳನ್ನು ವ್ಯವಸ್ಥೆ ಮಾಡಲು, ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ, ಮುಂದಿನ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(12/25) |

# –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದಲ್ಲಿ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಊಟದ ವ್ಯವಸ್ಥೆ ಮಾಡಲು ಇ–ಟೆಂಡರ್ ಅಹ್ವಾನಿಸುವ ಕುರಿತು.**

******

ವಿಶ್ವವಿದ್ಯಾನಿಲಯದಲ್ಲಿ ಮುಂಬರುವ ದಿನಗಳಲ್ಲಿ ನಡೆಸಲಾಗುವ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ, ಈ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಿರ್ವಹಿಸಲು ಊಟದ ವ್ಯವಸ್ಥೆ ಮಾಡುವ ಸಲುವಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಅಹ್ವಾನಿಸಿ ಕ್ರಮಕೈಗೊಳ್ಳಬೇಕಾಗಿರುತ್ತದೆ. ತತ್ಸಬಂಧವಾಗಿ, ಈ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ ಈ ಕಾರ್ಯಕ್ರಮವನ್ನು ಯಶ್ವಸಿಯಾಗಿ ನಿರ್ವಹಿಸಲು ವಿಶೇಷ ಊಟ, ಉಪಹಾರ ವ್ಯವಸ್ಥೆಯ ವೆಚ್ಚ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಹ್ವಾನಿಸಿ ಸೇವೆ ಪಡೆಯಲು ಹಾಗೂ ನಂತರ ಸಂಬಂಧಿಸಿದ ಸರಬರಾಜುದಾರರಿಗೆ ಹಣ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.06(d)/(12/25) |

## –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕಗಳನ್ನು ಪ್ರಧಾನ ಮಾಡಲು ಇ–ಟೆಂಡರ್ ಮೂಲಕ ಖರೀದಿಸುವ ಕುರಿತು.**

******

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಲ್ಲಿ/ ವಿಶ್ವವಿದ್ಯಾನಿಲಯದಲ್ಲಿ 2024–25ನೇ ಸಾಲಿನಲ್ಲಿ ಜರುಗಿದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ, ರ್‍ಯಾಂಕ್ ಪ್ರಮಾಣ ಪತ್ರ, ಸ್ವರ್ಣ ಪದಕ ಇತ್ಯಾದಿಗಳನ್ನು ಪ್ರಧಾನ ಮಾಡಬೇಕಾಗಿರುತ್ತದೆ. ಆದುದರಿಂದ, ಸ್ವರ್ಣ ಪದಕಗಳನ್ನು ಇ–ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಬೇಕಾಗಿರುತ್ತದೆ.

ತತ್ಸಂಬಂಧವಾಗಿ ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಲ್ಲಿ 2024–25ನೇ ಸಾಲಿನಲ್ಲಿ ಜರುಗಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕಗಳನ್ನು ಪ್ರಧಾನ ಮಾಡಬೇಕಾಗಿರುವುದರಿಂದ ನಿಯಮಾನುಸಾರ ದರಪಟ್ಟಿ ಕರೆದು ರೂ.5.00 ಲಕ್ಷ ಮಿತಿಯೊಳಗೆ ಸರಬರಾಜು ಆದೇಶ ನೀಡುವ ದಿನಾಂಕದ ದರಕ್ಕನುಗುಣವಾಗಿ ಸ್ವರ್ಣ ಪದಕಗಳನ್ನು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

ಕುಲಸಚಿವರು — ಕುಲಪತಿಗಳು

| ಪರೀಕ್ಷಾಂಗ ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.06(e)/(12/25) |

## –: ಟಿಪ್ಪಣಿ :–

ವಿಷಯ : ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳ ವಿವಿಧ ಪರೀಕ್ಷಾ ಸಂಭಾವನೆ ಭತ್ಯೆ ದರಗಳನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ : 1. ಸಂಯೋಜಿತ ಕಾಲೇಜುಗಳ ಪಾಂಶುಪಾಲರು/ಭೋಧಕೇತರರ ಸಂಘಟನೆಗಳ ಮನವಿ ಪತ್ರಗಳು.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.12.2025.

******

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸುತ್ತಿರುವ ಪದವಿ ಕಾಲೇಜುಗಳ ಬೋಧಕೇತರ ಸಿಬ್ಬಂದಿಗಳು, ಪ್ರಸ್ತುತ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದಿಂದ ಪಾವತಿಸುತ್ತಿರುವ ಸಂಭಾವನೆ, ದಿನಭತ್ಯೆ ಹಾಗೂ ಇತರೆ ಭತ್ಯೆ ದರಗಳನ್ನು ಕಳೆದ 7–8 ವರ್ಷಗಳಿಂದ ಪರಿಷ್ಕರಣೆ ಮಾಡದೆ ಇರುವುದರಿಂದ, ಪ್ರಸ್ತುತವಿರುವ ದರಗಳನ್ನು ಪರಿಷ್ಕರಣೆ ಮಾಡುವಂತೆ ಕೋರಿ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳ ಪಾಂಶುಪಾಲರು/ ಬೋಧಕೇತರ ಸಿಬ್ಬಂದಿಗಳು ಮತ್ತು ವಿವಿಧ ಸಂಘಟನೆಗಳ ಪದಾಧಿಕಾರಿಗಳು ಉಲ್ಲೇಖಿತ (1)ರಲ್ಲಿ ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:29.10.2025ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ವಿಷಯದ ಕುರಿತು ಪ್ರಸ್ತುತ ಇರುವ ಪರೀಕ್ಷಾ, ಸಂಭಾವನೆ ಪರೀಕ್ಷಾ ಸಮಿತಿಯು ಶಿಫಾರಸ್ಸು ಮಾಡುವ ವರದಿಯನ್ನು ಪುನಃ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ನಿರ್ಣಯಿಸಲಾಗಿತ್ತು.

ಈ ಸಂಬಂಧವಾಗಿ ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ದಿನಾಂಕ:05.12.2025 ರಂದು ಸಭೆ ನಡೆಸಿ ಪರೀಕ್ಷಾ ಸಂಭಾವನೆ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಿರುತ್ತದೆ. ಸದರಿ ಸಭೆಯ ನಡಾವಳಿಗಳನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಅಧ್ಯಾಪಕೇತರ ಸಿಬ್ಬಂದಿಗಳಿಗೆ ಸಂಭಾವನೆ/ ದಿನಭತ್ಯೆ ಹಾಗು ಇತರೆ ದರಗಳನ್ನು ಪರಿಷ್ಕರಣೆ ಮಾಡಿದ ವಿವರ ಪಟ್ಟಿ**

| Sl.No. | THEORY EXAMINATION WORK (UG & PG) | Existing Rates | Revised Rates | Staff Pattern | |
|---|---|---|---|---|---|
| | (i) Office Superintendent | 200=00 Per Day | 150=00 Per Session | a) 001 – 300 Students | 01 OS |
| | | | | b) Above 301 Students | 02 OS |
| | (ii) Clerk/Typist/Data Entry Operator | 150=00 Per Day | 100=00 Per Session | a) 001 – 300 Students | 01 Clerk<br>01 DEO |
| | | | | b) Above 301 Students | 02 Clerk<br>02 DEO |
| | (iii) Peon/Attender | 100=00 Per Day | 75=00 Per Session | a) For every Five Rooms -01 Attender/Peon<br>b) Office Attender/Peon- 01<br>**For Whole Examination** | |

ಮುಂದುವರೆದಿದೆ...

ಕುಲಸಚಿವರು　　　　ಕುಲಪತಿಗಳು

| Sl.No. | PRACTICAL EXAMINATION WORK (UG & PG) | Existing Rates | Revised Rates |
|---|---|---|---|
| 01 | (i) Clerk cum Typist (irrespective of sessions & number of Practical)<br>**NOTE: only clerk to be appointed for each center for one round of examination** | Rs.50-00 Per Batch | Rs.60-00/Batch |
| | (ii) Laboratory Assistant / Instructor | Rs.40-00 Per Batch | Rs.50-00/Batch |
| | (iii) Attenders / Helpers / Peons | Rs.30-00 Per Batch | Rs.40-00/Batch |

## Central Valuation work:

| Sl. No. | Responsibility | | Existing Rates | Revised Rates |
|---|---|---|---|---|
| 01 | Office Superintendent | Local allowance | Rs.250/Day | Rs.300/Day |
| 02 | Clerks | Local allowance | Rs.150/Day | Rs.200/Day |
| 03 | Attenders | Local allowance | Rs.125/Day | Rs.140/Day |
| 04 | Sweeper | Local allowance | Rs.100/Day | Rs.125/Day |

## Revaluation and other examination confidential work:

| Sl. No. | Responsibility | | Existing Rates | Revised Rates |
|---|---|---|---|---|
| 01 | Coordinator for Revaluation of the Centre where Valuation take place | Per script<br>Subject to a minimum | Rs.5-00<br>Rs.500-00 | Rs.6-00<br>Rs.600-00 |
| 02 | Remuneration to official who carry the Answer Scripts for various Revaluation centers as directed by the University. | Per script<br>Subject to a minimum | Rs.5-00<br>Rs.500-00 | Rs.6-00<br>Rs.600-00 |
| 03 | A. Sticker pasting on answer book | Per packet (A to D put together) | Rs.4-50 | Rs.5-00 |
| | B. Tearing of counter foils from main answer books, pinning, placing in the small cover, placing answer book in big covers and pining | | | |
| | C. Counting the coded counter foils placing inside the small cover and gumming safely. | | | |
| | D. Arranging big covers containing answer books in sets of ten and arranging small covers containing counter foils in sets of ten and arranging small covers containing counter foils in sets of twenty Entering Register No and signature | | | |
| 04 | **Processing of script for Revaluation / Retotaling /Xerox** | Per Scripts<br>Superintendent<br>Clerk & Menial Staff | Rs.10-00<br>Rs.3-00<br>Rs.7-00 | Rs.12-00<br>Rs.4-00<br>Rs.8-00 |
| | **A.** Clerical Assistance to Revaluation | | | |
| | **B.** Menial Assistance to Revaluation | | | |
| 05 | Marks card / Degree Certificate – Printing and serial wise and college wise arrangement. Remuneration is applicable only for regular exams. Clerk + Attender | | Rs.0.30 (6:4) (per marks card/Degree Certificate) | Rs.0.40 (6:4) (per marks card/Degree Certificate) |
| 06 | 1. form/Label/Sticker printing | | Rs.4-00 per packets (A to Put Together | Rs.4-50 Per packet (A to D put together) |
| | 2. Cutting and arranging of stickers in sets of 18 | | | |
| | 3. Pasting of labels on small and big covers and putting inside | | | |
| | 4. Verification and placing inside the big cover A –form and stickers | | | |

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳ ವಿವಿಧ ಪರೀಕ್ಷಾ ಸಂಭಾವನೆ ಭತ್ಯೆ ದರಗಳನ್ನು ಪರಿಷ್ಕರಿಸುವ ಕುರಿತು ದಿನಾಂಕ:05.12.2025 ರಂದು ಪರೀಕ್ಷಾ ಸಂಭಾವನೆ ಪರಿಷ್ಕರಣಾ ಸಮಿತಿಯು ಸಭೆ ನಡೆಸಿ ಪರೀಕ್ಷಾ ಸಂಭಾವನೆ ದರಗಳನ್ನು ಈ ಮೇಲ್ಕಂಡಂತೆ ಪರಿಷ್ಕರಣೆ ಮಾಡಿರುವ ಸಂಭಾವನೆ ಭತ್ಯೆ ದರಗಳನ್ನು ಸಭೆಯು ಪರಿಶೀಲಿಸಿದ ನಂತರ ಪರಿಷ್ಕೃತ ದರಗಳನ್ನು ಡಿಸೆಂಬರ್–2025/ ಜನವರಿ2026ರ ಪರೀಕ್ಷೆಯಿಂದ ಅನ್ವಯವಾಗುವಂತೆ ನಿಯಮಾನುಸಾರ ಜಾರಿಗೊಳಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.06(f)/(12/25) |

## –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಅರ್ಜಿಗಳನ್ನು ಕಳುಹಿಸುವ ಕುರಿತು.**

******

ವಿಶ್ವವಿದ್ಯಾನಿಲಯದಲ್ಲಿ 2026 ರ ಜನವರಿ/ ಫೆಬ್ರವರಿ ಮಾಹೆಯಲ್ಲಿ ಜರುಗಲಿರುವ ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ಸ್ವೀಕೃತಗೊಂಡಿರುವ/ಸ್ವೀಕೃತಗೊಳ್ಳುವ (CV) ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ 30.01.2026 ರಂದು ಜರುಗಲಿರುವ ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡುವ ಸಂಬಂಧ ಸ್ವೀಕೃತಗೊಂಡಿರುವ ಹಾಗೂ ಸ್ವೀಕೃತಗೊಳ್ಳುವ (CV) ಮನವಿಗಳನ್ನು ನಿಯಮಾನುಸಾರ ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಪರೀಕ್ಷಾಂಗ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.06(g)/(12/25) |

# –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ರಾಜ್ಯಪಾಲರು ಸಮಿತಿಯನ್ನು ರಚಿಸಬೇಕಾಗಿದ್ದು, ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಸೂಚಿಸುವ ಕುರಿತು.**

******

ವಿಶ್ವವಿದ್ಯಾನಿಲಯದಲ್ಲಿ 30.01.2026 ರಂದು ಜರುಗಲಿರುವ ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ರಾಜ್ಯಪಾಲರು ಸಮಿತಿಯನ್ನು ರಚಿಸಬೇಕಾಗಿದ್ದು, ಸದರಿ ಸಮಿತಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕಾಗಿರುವ ಕುರಿತು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ನೀಡಲು ಘನತೆವೆತ್ತ ಮಾನ್ಯ ರಾಜ್ಯಪಾಲರು ರಚಿಸಲ್ಪಡುವ ಸಮಿತಿಗೆ ಪ್ರೊ. ಎಸ್. ಆರ್. ನಿರಂಜನ, ಗೌರವಾನ್ವಿತ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು – ಇವರನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಪ್ರತಿನಿಧಿಯನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಪರೀಕ್ಷಾಂಗ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.06(h)/(12/25) |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಯಲದ ಪರೀಕ್ಷಾಂಗ ವಿಭಾಗಕ್ಕೆ ಬಟ್ಟೆ ಬ್ಯಾಗ್‌ಗಳನ್ನು (Cloth Bag) ಖರೀದಿಸುವ ಬಗ್ಗೆ.**

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ20.12.2025

*********

ವಿಶ್ವವಿದ್ಯಾನಿಲಯವು ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದೆ. ಆಯಾ ದಿನಗಳಂದು ನಡೆಯುವ ಎಲ್ಲಾ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ವಿಶ್ವವಿದ್ಯಾನಿಲಯದ ಪರೀಕ್ಷಾ ಗೌಪ್ಯತೆಯ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಕಾಲೇಜುಗಳಿಂದ ಸುರಕ್ಷಿತವಾಗಿ ಪ್ಯಾಕ್ ಮಾಡಿರುವಂತಹ ಬಂಡಲ್‌ಗಳನ್ನು ವಿಶ್ವವಿದ್ಯಾನಿಲಯದ ಕೋಡಿಂಗ್ ಕೇಂದ್ರದಲ್ಲಿ ಸ್ವೀಕರಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಪರೀಕ್ಷಾ ಕೇಂದ್ರಗಳಿಗೆ ಅಂದಾಜು 15,000 ಪ್ರಮಾಣದಲ್ಲಿ ಬಟ್ಟೆ ಬ್ಯಾಗ್‌ಗಳು (Cloth Bag) ಅವಶ್ಯಕವಾಗಿ ಬೇಕಾಗಿರುತ್ತದೆ.

ಆದುದರಿಂದ, ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಉತ್ತರ ಪತ್ರಿಕೆಗಳನ್ನು ಪ್ಯಾಕಿಂಗ್ ಮಾಡಲು ಅಗತ್ಯವಾಗಿ ಬೇಕಾಗಿರುವ ಬಟ್ಟೆ ಬ್ಯಾಗ್‌ಗಳನ್ನು (Cloth Bag) ಖರೀದಿಸಲು ತಗಲಬಹುದಾದ ಅಂದಾಜು ವೆಚ್ಚ ರೂ.5,00,000=00 ಗಳ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿಗಳನ್ನು ಅಹ್ವಾನಿಸಿ ಖರೀದಿಸಲು ಅನುಮತಿಗಾಗಿ ಹಾಗೂ ಸಾಮಾಗ್ರಿಯನ್ನು ಖರೀದಿಸಿದ ನಂತರ ಸರಬರಾಜುದಾರರಿಗೆ ಹಣ ಪಾವತಿ ಮಾಡುವ ಕುರಿತು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಗೌಪ್ಯತೆ ಹಾಗೂ ಭದ್ರತೆಯ ದೃಷ್ಟಿಯಿಂದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಉತ್ತರ ಪತ್ರಿಕೆಗಳನ್ನು ಪ್ಯಾಕಿಂಗ್ ಮಾಡಲು ಅಗತ್ಯವಾಗಿ ಬೇಕಾಗಿರುವ ಬಟ್ಟೆ ಬ್ಯಾಗ್‌ಗಳನ್ನು (Cloth Bag) ಖರೀದಿ ಮಾಡಲು ರೂ.5.00 ಲಕ್ಷ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ ಖರೀದಿಸಲು ಹಾಗೂ ಖರೀದಿಸಿದ ನಂತರ ಸಂಬಂಧಿಸಿದ ಸರಬರಾಜುದಾರರಿಗೆ ಹಣ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 27 | |
|---|---|
| ವಿಷಯ ಸಂಖ್ಯೆ: | ಸಿಂ.06(i)/(12/25) |

# –ಃ ಟಿಪ್ಪಣಿ ಃ–

**ವಿಷಯಃ** **ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳ ಖರೀದಿಯ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಉಪಸಮಿತಿ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುತ್ತಿರುವ ಕುರಿತು.**

ಉಲ್ಲೇಖಃ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ20.12.2025

*********

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:29.12.2025ರಂದು ಮಧ್ಯಾಹ್ನ 04:00 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಖರೀದಿಸಿದ ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳ ವಿವರ ಮತ್ತು ಬಿಲ್‌ಗಳ ಮಾಹಿತಿಗಳನ್ನು ಸಮಿತಿಯು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ **ರೂ.71,59,500–00** ಗಳನ್ನು (ರೂಪಾಯಿಗಳು ಎಪ್ಪತ್ತೊಂದು ಲಕ್ಷದ ಐವತ್ತೊಂಬತ್ತು ಸಾವಿರದ ಐದು ನೂರು ಮಾತ್ರ) ಸಂಬಂಧಿಸಿದ ಸಂಸ್ಥೆಯವರಿಗೆ ಪಾವತಿ ಮಾಡಲು ಸಮಿತಿಯು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು.

<table>
<tr><th>ಕ್ರ. ಸಂ.</th><th>ಸರಬರಾಜು ಸಂಸ್ಥೆಯ ಹೆಸರು</th><th>ವಿವರ</th><th>ಒಟ್ಟು ಹುಂಡಿ ಮೊತ್ತ</th></tr>
<tr><td>01</td><td>M/s Orient Press LTD, Bangalore</td><td>
<table>
<tr><th>Sl. No.</th><th>Bill No</th><th>Bill Date</th><th>Amount</th></tr>
<tr><td>01</td><td>TP/25-26/0404</td><td>08.12.2025</td><td>24,97,500/-</td></tr>
<tr><td>02</td><td>TP/25-26/0410</td><td>13.12.2025</td><td>46,62,000/-</td></tr>
<tr><td colspan="3">Total Rs.</td><td>71,59,500=00</td></tr>
<tr><td colspan="4">Total Rs. (Rupees Seventy One Lakhs Fifty Nine Thousand Five Hundred only)</td></tr>
</table>
</td><td>71,59,500=00</td></tr>
</table>

ಈ ಹಿನ್ನೆಲೆಯಲ್ಲಿ, ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Orient Press Ltd., Bangalore – ಇವರಿಗೆ ರೂ.71,59,500–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಇ–ಟೆಂಡರ್ ಮೂಲಕ ಕರಾರು ದರ ಒಪ್ಪಂದ ಮಾಡಿಕೊಂಡು M/s. Orient Press Ltd, Bangalore – ಈ ಸಂಸ್ಥೆಯವರಿಂದ ಖಾಲಿ ಸೈದ್ಧಾಂತಿಕ ಉತ್ತರ ಪತ್ರಿಕೆಗಳನ್ನು ಖರೀದಿಸಲಾಗಿರುವ ಬಾಬ್ತು ರೂ.71,59,500–00 ಗಳ ಬಿಲ್ಲುಗಳನ್ನು ದಿನಾಂಕ:29.12.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿದ ನಂತರ ಖರೀದಿ ಬಿಲ್ಲಿನ ಬಾಬ್ತು ರೂ.71,59,500–00 ಗಳನ್ನು M/s. Orient Press Ltd, Bangalore - ಇವರಿಗೆ ನಿಯಮಾನುಸಾರ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                        ಕುಲಪತಿಗಳು

| ಪರೀಕ್ಷಾಂಗ ವಿಭಾಗ – 28 | |
|---|---|
| ವಿಷಯ ಸಂಖ್ಯೆ: | ಸಿಂ.06(j)/(12/25) |

## –: ಟಿಪ್ಪಣಿ :–

**ವಿಷಯ:** **ಖಾಲಿ ಪ್ರಾಯೋಗಿಕ ಉತ್ತರ ಪತ್ರಿಕೆಗಳ ಖರೀದಿಯ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಉಪಸಮಿತಿ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಸಲ್ಲಿಸುತ್ತಿರುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.12.2025

*********

ಪರೀಕ್ಷಾಂಗ ವಿಭಾಗದಲ್ಲಿ ರೂಪಾಯಿ ಒಂದು ಲಕ್ಷಕ್ಕಿಂತ ಮಿತಿ ಮೀರಿರುವ ಖರೀದಿ / ಸೇವೆಗಳನ್ನು ಪಡೆದಿರುವ ವಿವಿಧ ಸಂಸ್ಥೆಗಳ ಬಿಲ್ಲುಗಳ ಪರಿಶೀಲನೆ ಮತ್ತು ಹಣ ಪಾವತಿ ಮಾಡುವ ಸಂಬಂಧ, ಉಪ ಸಮಿತಿ ಸಭೆಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:29.12.2025ರಂದು ಮಧ್ಯಾಹ್ನ 04:00 ಗಂಟೆಗೆ ಕುಲಸಚಿವರು (ಪರೀಕ್ಷಾಂಗ) ರವರ ಕೊಠಡಿಯಲ್ಲಿ ಏರ್ಪಡಿಸಲಾಗಿತ್ತು.

ಈ ಸಂಬಂಧವಾಗಿ, ಪರೀಕ್ಷಾ ಕಾರ್ಯಗಳಿಗೆ ನಿಯಮಾನುಸಾರ ಕರಾರು ದರ ಒಪ್ಪಂದ ಮಾಡಿಕೊಂಡ (ಇ–ಟೆಂಡರ್) ಸಂಸ್ಥೆಯವರಿಂದ ಖರೀದಿಸಿದ ಖಾಲಿ ಪ್ರಾಯೋಗಿಕ ಉತ್ತರ ಪತ್ರಿಕೆಗಳ ವಿವರ ಮತ್ತು ಬಿಲ್‌ಗಳ ಮಾಹಿತಿಗಳನ್ನು ಸಮಿತಿಯು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ಬಳಿಕ, ಈ ಕೆಳಕಂಡ ರೂ.11,10,000–00 ಗಳನ್ನು (ರೂಪಾಯಿಗಳು ಹನ್ನೊಂದು ಲಕ್ಷದ ಹತ್ತು ಸಾವಿರ ಮಾತ್ರ) ಸಂಬಂಧಿಸಿದ ಸಂಸ್ಥೆಯವರಿಗೆ ಪಾವತಿ ಮಾಡಲು ಸಮಿತಿಯು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು.

<table>
<tr><th>ಕ್ರ. ಸಂ.</th><th>ಸರಬರಾಜು ಸಂಸ್ಥೆಯ ಹೆಸರು</th><th>ವಿವರ</th><th>ಒಟ್ಟು ಹುಂಡಿ ಮೊತ್ತ</th></tr>
<tr><td>01</td><td>M/s Orient Press LTD, Bangalore</td><td>
<table>
<tr><th>Sl. No.</th><th>Bill No</th><th>Bill Date</th><th>Amount</th></tr>
<tr><td>01</td><td>TP/25-26/0403</td><td>08.12.2025</td><td>11,10,000/-</td></tr>
<tr><td colspan="3">Total Rs.</td><td>11,10,000=00</td></tr>
<tr><td colspan="4">Total Rs. (Rupees Eleven Lakhs Ten Thousand only)</td></tr>
</table>
</td><td>11,10,000=00</td></tr>
</table>

ಈ ಹಿನ್ನೆಲೆಯಲ್ಲಿ, ಉಪಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ಅನುಮೋದನೆಗಾಗಿ ಹಾಗೂ M/s Orient Press Ltd., Bangalore – ಇವರಿಗೆ ರೂ.11,10,000–00 ಗಳನ್ನು ಪಾವತಿ ಮಾಡುವ ಕುರಿತು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗು ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗಕ್ಕೆ ಇ–ಟೆಂಡರ್ ಮೂಲಕ ಕರಾರು ದರ ಒಪ್ಪಂದ ಮಾಡಿಕೊಂಡು M/s. Orient Press Ltd, Bangalore – ಈ ಸಂಸ್ಥೆಯವರಿಂದ ಖಾಲಿ ಪ್ರಾಯೋಗಿಕ ಉತ್ತರ ಪತ್ರಿಕೆಗಳನ್ನು ಖರೀದಿಸಲಾಗಿರುವ ಬಾಬ್ತು ರೂ.11,10,000–00 ಗಳ ಬಿಲ್ಲುಗಳನ್ನು ದಿನಾಂಕ:29.12.2025 ರ ಉಪಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಯನ್ನು ಪರಿಶೀಲಿಸಿದ ನಂತರ ಖರೀದಿ ಬಿಲ್ಲಿನ ಬಾಬ್ತು ರೂ.11,10,000–00 ಗಳನ್ನು M/s. Orient Press Ltd, Bangalore - ಇವರಿಗೆ ನಿಯಮಾನುಸಾರ ಪಾವತಿಸಲು ಹಾಗೂ ಉಪಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 29 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(12/25) |

## –: ಟಿಪ್ಪಣಿ :–

**ವಿಷಯ : ದೃಶ್ಯಕಲಾ ಮಹಾವಿದ್ಯಾಲಯದ ಬಾಲಕರ ವಸತಿನಿಲಯಕ್ಕೆ Solar Water Heater ಗಳನ್ನು ಸರಬರಾಜು ಮಾಡುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಾಲಕರ ವಸತಿ ನಿಲಯದಲ್ಲಿ ದೃಶ್ಯಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಹಾಗೂ IAS/KAS" ತರಬೇತಿ ಕೇಂದ್ರದಲ್ಲಿರುವ ವಿದ್ಯಾರ್ಥಿಗಳಿಗೆ ಬಿಸಿ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ ಇವರು ಕೋರಿರುತ್ತಾರೆ.

ಆದ್ದರಿಂದ, ಅಲ್ಲಿಗೆ ಸೋಲಾರ್ ವಾಟರ್ ಹೀಟರ್‌ಗಳನ್ನು ಖರೀದಿಸಿ ಅಳವಡಿಸುವ ಅವಶ್ಯಕತೆ ಇದ್ದು, 300 ಲೀ ಸಾಮರ್ಥ್ಯದ 8 ಸಂಖ್ಯೆ ಸೋಲಾರ್ ವಾಟರ್ ಹೀಟರ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದ್ದು, ಅದರ ಅಂದಾಜು ವೆಚ್ಚ ರೂ.4,90,000/– ಆಗುತ್ತಿದ್ದು, ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಹಾಗೂ ಹಾಗೂ IAS/KAS" ತರಬೇತಿ ಕೇಂದ್ರದಲ್ಲಿರುವ ವಿದ್ಯಾರ್ಥಿಗಳಿಗೆ ಬಿಸಿ ನೀರಿನ ವ್ಯವಸ್ಥೆ ಮಾಡಲು 300 ಲೀ ಸಾಮರ್ಥ್ಯದ 8 ಸಂಖ್ಯೆಯ ಸೋಲಾರ್ ವಾಟರ್ ಹೀಟರ್‌ಗಳನ್ನು ದರಪಟ್ಟಿ ಆಧಾರದ ಮೇಲೆ ಅಂದಾಜು ವೆಚ್ಚ ರೂ.4,90,000/– ಗಳ ಮಿತಿಯೊಳಗೆ ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 30 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(12/25) |

# –: ಟಿಪ್ಪಣಿ :–

ವಿಷಯ : **Art Gallery & "ಸಂಕಲ್ಪ IAS/KAS" ತರಬೇತಿ ಕೇಂದ್ರಕ್ಕೆ 5KVA UPS Battery ಗಳನ್ನು ಸರಬರಾಜು ಮಾಡುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ Art Gallery & "ಸಂಕಲ್ಪ IAS/KAS" ತರಬೇತಿ ಕಟ್ಟಡಕ್ಕೆ UPS & Battery ಗಳನ್ನು ಹೊಸದಾಗಿ ಸರಬರಾಜು ಮಾಡಿ ಅಳವಡಿಸಿಕೊಡುವಂತೆ ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ ಇವರು ಕೋರಿದ್ದು, 5 KVA ಸಾಮರ್ಥ್ಯದ ಎರಡು ಸಂಖ್ಯೆ UPS Battery ಗಳ ಅವಶ್ಯಕತೆ ಇದ್ದು, ಅದರ ಅಂದಾಜು ವೆಚ್ಚ ರೂ.5.00 ಲಕ್ಷ ಆಗುತ್ತಿದ್ದು, ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ Art Gallery & "ಸಂಕಲ್ಪ IAS/KAS" ತರಬೇತಿ ಕಟ್ಟಡಕ್ಕೆ 5 KVA ಸಾಮರ್ಥ್ಯದ ಎರಡು ಸಂಖ್ಯೆಯ UPS & Battery ಗಳನ್ನು ದರಪಟ್ಟಿ ಆಧಾರದ ಮೇಲೆ ಅಂದಾಜು ಮೊತ್ತ ರೂ.5.00/– ಲಕ್ಷಗಳ ಮಿತಿಯೊಳಗೆ ನಿಯಮಾನುಸಾರ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 31 | |
|---|---|
| ವಿಷಯ ಸಂಖ್ಯೆ: | ಸಿಂ.07(c)/(12/25) |

# –: ಟಿಪ್ಪಣಿ :–

ವಿಷಯ : **"Art Gallery & ಸಂಕಲ್ಪ IAS/KAS" ತರಬೇತಿ ಕೇಂದ್ರಕ್ಕೆ Wi-Fi Access Point ಗಳನ್ನು ಖರೀದಿಸಿ ಅಳವಡಿಸುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ Art Gallery & ಸಂಕಲ್ಪ IAS/KAS" ತರಬೇತಿ ಕಟ್ಟಡಕ್ಕೆ ಹೆಚ್ಚುವರಿಯಾಗಿ Wi-Fi Access Point ಗಳ ಅವಶ್ಯಕತೆ ಇದ್ದು, ಹೊಸದಾಗಿ ಖರೀದಿಸಿ ಅಳವಡಿಸಿಕೊಡುವಂತೆ ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ, ಇವರು ಕೋರಿದ್ದು ಅಂದಾಜು ವೆಚ್ಚ ರೂ.1.90 ಲಕ್ಷ ಆಗುತ್ತಿದ್ದು, ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ Art Gallery & ಸಂಕಲ್ಪ IAS/KAS" ತರಬೇತಿ ಕಟ್ಟಡಕ್ಕೆ Wi-Fi Access Point ಗಳನ್ನು ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಅಂದಾಜು ಮೊತ್ತ ರೂ.1.90/– ಲಕ್ಷಗಳ ಮಿತಿಯೊಳಗೆ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 32 | |
|---|---|
| ವಿಷಯ ಸಂಖ್ಯೆ: | ಸಿಂ.07(d)/(12/25) |

## –: ಟಿಪ್ಪಣಿ :–

**ವಿಷಯ : ದೃಶ್ಯಕಲಾ ಮಹಾವಿದ್ಯಾಲಯಕ್ಕೆ CCTV ಗಳನ್ನು ಅಳವಡಿಸುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ ಮುಖ್ಯದ್ವಾರ, ಆಡಳಿತ ಕಛೇರಿ, ಬಾಲಕರ ವಸತಿ ನಿಲಯ, ಆರ್ಟ್ ಗ್ಯಾಲರಿ ಮತ್ತು ಬಯಲು ರಂಗಮಂದಿರಕ್ಕೆ ಹೋಗುವ ರಸ್ತೆಯಲ್ಲಿ 10 ಸಂಖ್ಯೆ CCTV ಗಳು ಅವಶ್ಯಕತೆ ಇದ್ದು, ಹೊಸದಾಗಿ ಖರೀದಿಸಿ ಅಳವಡಿಸುವಂತೆ ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ ಇವರು ಕೋರಿದ್ದು, ಅದರ ಅಂದಾಜು ವೆಚ್ಚ ರೂ.2.50 ಲಕ್ಷ ಆಗುತ್ತಿದ್ದು, ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:30.12.2025 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಮುಖ್ಯದ್ವಾರ, ಆಡಳಿತ ಕಛೇರಿ, ಬಾಲಕರ ವಸತಿ ನಿಲಯ, ಆರ್ಟ್ ಗ್ಯಾಲರಿ ಮತ್ತು ಬಯಲು ರಂಗಮಂದಿರಕ್ಕೆ ಹೋಗುವ ರಸ್ತೆಯನ್ನೊಳಗೊಂಡಂತೆ ಒಟ್ಟು: 10 ಸಂಖ್ಯೆ CCTV ಗಳನ್ನು ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಅಂದಾಜು ಮೊತ್ತ ರೂ.2.50/– ಲಕ್ಷಗಳ ಮಿತಿಯೊಳಗೆ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 33 | |
|---|---|
| ವಿಷಯ ಸಂಖ್ಯೆ: | ಸಿಂ.07(e)/(12/25) |

## –: ಟಿಪ್ಪಣಿ :–

ವಿಷಯ : **ದೃಶ್ಯಕಲಾ ಮಹಾವಿದ್ಯಾಲಯಕ್ಕೆ 100 Mbps lease line – BSNL ನಿಂದ ಪೂರೈಸಿಕೊಳ್ಳುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯದ 100 Mbps lease line – BSNL ಅವಧಿ ಸೆಪ್ಟಂಬರ್–2025 ರಲ್ಲಿ ಮುಕ್ತಾಯಗೊಂಡಿದ್ದು, ಮುಂದಿನ ಒಂದು ವರ್ಷದ ಅವಧಿಗೆ lease line ಪೂರೈಸಿಕೊಡುವಂತೆ ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ ಇವರು ಕೋರಿದ್ದು, ದರಪಟ್ಟಿ ಆಧಾರದ ಮೇಲೆ ವಿವಿಧ ಸಂಸ್ಥೆಗಳಿಂದ ದರಪಟ್ಟಿ ಕರೆದು ಕನಿಷ್ಠ ದರ ನಮೂದಿಸಿದ BSNL ಗೆ ಕಾರ್ಯಾದೇಶ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಲು ಹಾಗೂ ಸದರಿ ಸಂಸ್ಥೆಯವರಿಗೆ ರೂ.2,95,000/– ನಿಯಮಾನುಸಾರ ಪಾವತಿಸಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ 100 Mbps Lease Line ಪೂರೈಸಲು ದರಪಟ್ಟಿಯಲ್ಲಿ ಯಶಸ್ವಿಯಾದ BSNL ( Bharat Sanchar Nigam Limited) ಸಂಸ್ಥೆಯೊಂದಿಗೆ ಅಕ್ಟೋಬರ್–2025 ರಿಂದ ಒಂದು ವರ್ಷದ ಅವಧಿಗೆ ಸೇವೆಯನ್ನು ಮುಂದುವರೆಸುವಂತೆ ಕಾರ್ಯಾದೇಶ ನೀಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು. ಮುಂದುವರೆದು, ಸದರಿ ಸಂಸ್ಥೆಯವರಿಗೆ ನಿಯಮಾನುಸಾರ ರೂ.2,95,000/– ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 34 | |
|---|---|
| ವಿಷಯ ಸಂಖ್ಯೆ: | ಸಿಂ.07(f)/(12/25) |

## –: ಟಿಪ್ಪಣಿ :–

**ವಿಷಯ : "ಹಸಿರು ಗ್ರಂಥಾಲಯ" ನಿರ್ಮಾಣ ಮಾಡುವ ಕುರಿತು.**

******

ವಿಶ್ವವಿದ್ಯಾನಿಲಯದ ಆವರಣದ ಜ್ಞಾನಸೌಧ ಕಟ್ಟಡದ ಪಕ್ಕದಲ್ಲಿ ಹಾಗೂ ಆಡಳಿತ ಭವನದ ಮುಂಭಾಗದಲ್ಲಿ ಹಂಚಿನ ಕುಟೀರ, Garden Pathway ಹಾಗೂ ವಿದ್ಯುತ್ ವ್ಯವಸ್ಥೆಯನ್ನೊಳಗೊಂಡ "ಹಸಿರು ಗ್ರಂಥಾಲಯ" ನಿರ್ಮಾಣ ಮಾಡಿಕೊಡುವಂತೆ ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ಕೋರಿದ್ದು ಅದರ ಅಂದಾಜು ವೆಚ್ಚ ರೂ.10.00 ಲಕ್ಷ ಆಗುತ್ತಿದ್ದು, ಅದನ್ನು ಸರ್ಕಾರಿ ಸಂಸ್ಥೆಯ ಮುಖಾಂತರ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಜ್ಞಾನಸೌಧ ಕಟ್ಟಡದ ಪಕ್ಕದಲ್ಲಿ ಹಾಗೂ ಆಡಳಿತ ಭವನದ ಮುಂಭಾಗದಲ್ಲಿ ಹಂಚಿನ ಕುಟೀರ, Garden Pathway ಹಾಗೂ ವಿದ್ಯುತ್ ವ್ಯವಸ್ಥೆಯನ್ನೊಳಗೊಂಡ "ಹಸಿರು ಗ್ರಂಥಾಲಯ" ವನ್ನು ಅಂದಾಜು ವೆಚ್ಚ ರೂ.10.00 ಲಕ್ಷ ಮಿತಿಯೊಳಗೆ ಸರ್ಕಾರಿ ಸಂಸ್ಥೆಯ ಮುಖಾಂತರ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 35 | |
|---|---|
| ವಿಷಯ ಸಂಖ್ಯೆ: | ಸಿಂ.07(g)/(12/25) |

## –: ಟಿಪ್ಪಣಿ :–

**ವಿಷಯ : ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ಆವರಣದಲ್ಲಿರುವ 400 KVA Electrical load ನ್ನು 250 KVA Electrical load ಗೆ ಕಡಿಮೆ ಮಾಡುವ ಕುರಿತು.**

******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ BESCOM ನಿಂದ 400 KVA Electrical load ಮಂಜೂರಾಗಿದ್ದು ವಿಶ್ವವಿದ್ಯಾನಿಲಯದಲ್ಲಿ ಗರಿಷ್ಠ 230 KVA ವರೆಗೆ ವಿದ್ಯುತ್ ಬಳಕೆ ಆಗುತ್ತಿದ್ದು, ಉಳಿದ 150 KVA load ಹೆಚ್ಚುವರಿ ಆಗಿದ್ದು, BESCOM ಗೆ ನಿಗದಿತ ಶುಲ್ಕ ಹೆಚ್ಚುವರಿಯಾಗಿ ಪಾವತಿಸುತ್ತಿದ್ದು, 400 KVA load to 250 KVA load ಕಡಿಮೆ ಮಾಡಲು ಅಂದಾಜು ಮೊತ್ತ ರೂ.1.62 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ವಿದ್ಯುತ್ ಗುತ್ತಿಗೆದಾರರ ಮುಖಾಂತರ ಕೆಲಸ ನಿರ್ವಹಿಸಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ BESCOM ನಿಂದ ಮಂಜೂರಾಗಿರುವ 400 KVA Electrical Load ನ ಪ್ರಮಾಣವನ್ನು ವಿಶ್ವವಿದ್ಯಾನಿಲಯದ ಅವಶ್ಯಕತೆಗನುಗುಣವಾಗಿ 250 KVA Load ಗೆ ಕಡಿಮೆ ಮಾಡುವ ವಿದ್ಯುತ್ ಕಾಮಗಾರಿಯನ್ನು ಅಂದಾಜು ಮೊತ್ತ ರೂ.1.62 ಲಕ್ಷಗಳ ಮಿತಿಯೊಳಗೆ ವಿದ್ಯುತ್ ಗುತ್ತಿಗೆದಾರರ ಮುಖಾಂತರ ದರಪಟ್ಟಿ ಆಧಾರದ ಮೇಲೆ ಕೆಲಸ ನಿರ್ವಹಿಸಲು ಸಭೆಯು ಒಮ್ಮದಿಂದ ಅನುಮೋದನೆ ನೀಡಿತು.

ಕುಲಸಚಿವರು　　　　　　　　　　ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 36 | |
|---|---|
| ವಿಷಯ ಸಂಖ್ಯೆ: | ಸಿಂ.07(h)/(12/25) |

## –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯ ಹೊಸ ವಿಜ್ಞಾನ ಕಟ್ಟಡದ 2ನೇ ಮಹಡಿಯಲ್ಲಿ ನಿರ್ಮಿಸಲಾಗಿರುವ ಕೊಠಡಿಗಳನ್ನು ಎಂ.ಸಿ.ಎ. ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ಮೀಸಲಿರಿಸುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಹೊಸ ವಿಜ್ಞಾನ ಕಟ್ಟಡದ 2ನೇ ಮಹಡಿಯಲ್ಲಿ ಪರಿಸರ ವಿಜ್ಞಾನ ಹಾಗೂ ಎಂ.ಸಿ.ಎ. ಅಧ್ಯಯನ ವಿಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುಂತೆ ತರಗತಿ ಕೊಠಡಿಗಳನ್ನು ನಿರ್ಮಿಸಲು ದಿನಾಂಕ:07.10.2023 ರ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ. ಅದರಂತೆ 05 ಕೊಠಡಿಗಳನ್ನು ನಿರ್ಮಿಸಲಾಗಿರುತ್ತದೆ.

ಆದರೆ, ಅಧ್ಯಕ್ಷರು, ಎಂ.ಸಿ.ಎ ಹಾಗೂ ಗಣಕ ವಿಜ್ಞಾನ ಅಧ್ಯಯನ ವಿಭಾಗ ಇವರು – ಎಂ.ಸಿ.ಎ. ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಲ್ಲಿ ಅಧಿಕ ವಿದ್ಯಾರ್ಥಿಗಳು ದಾಖಲಾಗಿರುವುದರಿಂದ, ಕೊಠಡಿಗಳ ಕೊರತೆಯಾಗಿರುತ್ತದೆ. ಅಲ್ಲದೆ, ಗಣಕ ವಿಜ್ಞಾನ ವಿಭಾಗದ ಪೂರ್ಣಕಾಲಿಕ ಸಂಶೋಧನಾರ್ಥಿಗಳಿಗೂ ಕೊಠಡಿಯ ಅವಶ್ಯಕತೆಯಿರುತ್ತದೆ. ಆದ್ದರಿಂದ, ಸದರಿ ಕೊಠಡಿಗಳನ್ನು ಪೂರ್ಣವಾಗಿ ಎಂ.ಸಿ.ಎ. ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ಮೀಸಲಿರಿಸಬೇಕೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕೊಠಡಿಗಳನ್ನು ಎಂ.ಸಿ.ಎ. ಮತ್ತು ಗಣಕ ವಿಜ್ಞಾನ ಅಧ್ಯಯನ ವಿಭಾಗಗಳಿಗೆ ಮೀಸಲಿರಿಸುವ ಕುರಿತು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿರುವ MCA (Master of Computer Application) ಅಧ್ಯಯನ ವಿಭಾಗ ಹಾಗೂ Computer Science ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಹಾಗೂ ಸದರಿ ವಿಭಾಗಗಳ ಪೂರ್ಣಕಾಲಿಕ ಸಂಶೋಧನಾರ್ಥಿಗಳಿಗೆ ಕೊಠಡಿಯ ಅವಶ್ಯಕತೆ ಇರುವುದರಿಂದ ಹೊಸ ವಿಜ್ಞಾನ ಕಟ್ಟಡದ 2ನೇ ಮಹಡಿಯಲ್ಲಿ ಹೊಸದಾಗಿ ನಿರ್ಮಿಸಲಾಗಿರುವ 05 ಕೊಠಡಿಗಳನ್ನು Master of Computer Application ಅಧ್ಯಯನ ವಿಭಾಗ ಹಾಗೂ Computer Science ಅಧ್ಯಯನ ವಿಭಾಗಗಳಿಗೆ ಮೀಸಲಿರಿಸಲು ಸಭೆಯು ಒಮ್ಮದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 37 | |
|---|---|
| ವಿಷಯ ಸಂಖ್ಯೆ: | ಸಿಂ.06(i)/(12/25) |

# –: ಟಿಪ್ಪಣಿ :–

**ವಿಷಯಃ** **ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿ ನವೀಕರಿಸುವ ಕುರಿತು.**

ಉಲ್ಲೇಖ: ಪ್ರಾಚಾರ್ಯರು ದೃಶ್ಯಕಲಾ ಕಾಲೇಜು, ದಾವಣಗೆರೆ ಇವರ ಮನವಿ ಪತ್ರ:ಸಂಖ್ಯೆ/ವಿದೃಕಮ/ಅಭಿವೃದ್ಧಿ/2025–26/243 ದಿನಾಂಕ:22.12.2025

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿ ಸಂಪೂರ್ಣ ಶಿಥಿಲಗೊಂಡಿದ್ದು, ಕೊಠಡಿಯನ್ನು ನವೀಕರಿಸುವಂತೆ ಪ್ರಾಚಾರ್ಯರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಕೊಠಡಿ ವಿಸ್ತೀರ್ಣ 32 ಅಡಿ ಉದ್ದ X 26 ಅಡಿ ಅಗಲ X 12ಅಡಿ ಎತ್ತರ ಇದ್ದು ಕೊಠಡಿ ನವೀಕರಿಸುವ ಕಾಮಗಾರಿಯಲ್ಲಿ Ceiling Plaster, Removing Old Scrapped Paint ಹೊಸದಾಗಿ Plaster ಮಾಡಿಸುವುದು Painting ಮಾಡಿಸುವುದು False Ceiling ಮಾಡಿಸುವುದು Door ಗಳ ರಿಪೇರಿ ಕಿಟಕಿಗಳಿಗೆ ಹೊಸದಾಗಿ Curtain ಮತ್ತು ಶೌಚಾಲಯಕ್ಕೆ Western ಕಮೋಡ್ ಅಳವಡಿಕೆ ಅವಶ್ಯಕತೆ ಇದ್ದು ಇದರ ನವೀಕರಣ ಮಾಡಲು ಅಂದಾಜು ಮೊತ್ತ ರೂ. 5.00 ಲಕ್ಷಗಳು ಆಗುತ್ತಿದ್ದು ಇದನ್ನು ದರಪಟ್ಟಿ ಆಧಾರದ ಮೇಲೆ ಸಿವಿಲ್ ಗುತ್ತಿಗೆದಾರರ ಮೂಲಕ ಕೈಗೊಳ್ಳಲು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಕೊಠಡಿ ಸಂಪೂರ್ಣ ಶಿಥಿಲಗೊಂಡಿರುವುದರಿಂದ – ಸದರಿ ಕೊಠಡಿಗೆ Ceiling Plaster, Removing Old Scrapped Paint, ಹೊಸದಾಗಿ Plaster ಮಾಡಿಸುವ, Painting ಮಾಡಿಸುವ, False Ceiling ಮಾಡಿಸುವ, Door ಗಳ ರಿಪೇರಿ, ಕಿಟಕಿಗಳಿಗೆ ಹೊಸದಾಗಿ Curtain ಹಾಕಿಸುವ ಮತ್ತು ಶೌಚಾಲಯಕ್ಕೆ Western ಕಮೋಡ್ ಅಳವಡಿಸುವ ಕೆಲಸವನ್ನು ಅಂದಾಜು ಮೊತ್ತ ರೂ.5.00 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಸರ್ಕಾರಿ ಸಂಸ್ಥೆಯ ಮೂಲಕ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು          ಕುಲಪತಿಗಳು

| ಹಣಕಾಸು ವಿಭಾಗ – 38 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(12/25) |

# –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯ 2025–26ನೇ ಸಾಲಿನ 2ನೇ ಹಣಕಾಸು ಸಮಿತಿ ಸಭೆಯ ಸಭಾ ನಡಾವಳಿಯನ್ನು ಅನುಮೋದಿಸುವ ಕುರಿತು.**

******

ವಿಶ್ವವಿದ್ಯಾನಿಲಯ, 2025–26ನೇ ಸಾಲಿನಲ್ಲಿ, ದಿನಾಂಕ:02.12.2025ರಂದು, ಉನ್ನತ ಶಿಕ್ಷಣ ಪರಿಷತ್‌ನ ಸಭಾಂಗಣದಲ್ಲಿ, ಏರ್ಪಡಿಸಲಾಗಿದ್ದ 2ನೇ ಹಣಕಾಸು ಸಮಿತಿ ಸಭೆಯಲ್ಲಿ ಕಾರ್ಯಸೂಚಿಯ ಕುರಿತು ಕೂಲಂಕುಶವಾಗಿ ಚರ್ಚಿಸಿ ನಿರ್ಣಯಿಸಲಾಗಿರುವ ಸಭಾ ನಡಾವಳಿಗಳನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರಿನಲ್ಲಿ ದಿನಾಂಕ:02.12.2025ರಂದು ಜರುಗಿದ ವಿಶ್ವವಿದ್ಯಾನಿಲಯದ 2025–26ನೇ ಆರ್ಥಿಕ ವರ್ಷದ ಎರಡನೇ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳ ಕುರಿತು ಸುಧೀರ್ಘವಾಗಿ ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ – 39 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(12/25) |

## –: ಟಿಪ್ಪಣಿ :–

**ವಿಷಯ : 2025–26ನೇ ಸಾಲಿನಲ್ಲಿ ಇ–ಹರಾಜು ಮೂಲಕ ನಿಶ್ಚಿತ ಠೇವಣಿ ಪ್ರಕ್ರಿಯೆ ಕುರಿತು.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025–26 ಹಾಗೂ 2026–27ನೇ ಸಾಲಿನ ವಿಶ್ವವಿದ್ಯಾನಿಲಯದ ಹೆಚ್ಚುವರಿ ಹಣವನ್ನು, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾತ್ರ ಇ–ಹರಾಜು ಮೂಲಕ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲು ಇ–ಹರಾಜು ಪ್ರಕಟಣೆ ಹೊರಡಿಸಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ನಡಾವಳಿಯನ್ನು ಅವಗಾಹನೆಗೆ ತರುತ್ತಾ, ಇ–ಹರಾಜು ಪ್ರಕ್ರಿಯೆ ಕೈಗೊಂಡಿರುವುದಕ್ಕೆ ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2025–26 ಹಾಗೂ 2026–27ನೇ ಸಾಲಿನ ವಿಶ್ವವಿದ್ಯಾನಿಲಯದ ಹೆಚ್ಚುವರಿ ಹಣವನ್ನು, ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಇ–ಹರಾಜು ಮೂಲಕ ನಿಶ್ಚಿತ ಠೇವಣಿಗಳಲ್ಲಿ (Fixed Deposit) ಹೂಡಿಕೆ ಮಾಡಲು ಇ–ಟೆಂಡರ್ ಪ್ರಕಟಣೆ ಹೊರಡಿಸಿ ಇ–ಟೆಂಡರ್‌ನ ತಾಂತ್ರಿಕ ಬಿಡ್ ಹಾಗೂ ಹಣಕಾಸು ಬಿಡ್ ಮೌಲ್ಯಮಾಪನ ನಡೆಸಿರುವ ಉಪ ಸಮಿತಿ ಸಭಾ ನಡಾವಳಿಯ ಕುರಿತು ಸುಧೀರ್ಘವಾಗಿ ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ತೋಟಗಾರಿಕೆ ವಿಭಾಗ – 40 | |
|---|---|
| ವಿಷಯ ಸಂಖ್ಯೆ: | ಸಿಂ.08(a)/(12/25) |

## –: ಟಿಪ್ಪಣಿ :–

**ವಿಷಯ:** **ವಿಶ್ವವಿದ್ಯಾನಿಲಯದ ಒಳಾಂಗಣ ಕ್ರೀಡಾಂಗಣದ (Indoor Stadium) ಮುಂಭಾಗದಲ್ಲಿರುವ ಉದ್ಯಾನವನಕ್ಕೆ ದಿ. ಶ್ರೀಮತಿ ಸಾಲು ಮರದ ತಿಮ್ಮಕ್ಕ ವನ – ಎಂದು ನಾಮಕರಣ ಮಾಡುವ ಕುರಿತು.**

*********

ಶ್ರೀಮತಿ ಸಾಲುಮರದ ತಿಮ್ಮಕ್ಕ ಕರ್ನಾಟಕದ ಪ್ರಖ್ಯಾತ ಪರಿಸರವಾದಿ, ಇವರು ಮಕ್ಕಳಿಲ್ಲದ ಕೊರಗನ್ನು ನೀಗಿಸಿಕೊಳ್ಳಲು ರಸ್ತೆಯ ಬದಿಯಲ್ಲಿ ನೂರಾರು ಆಲದ ಮರಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಪೋಷಿಸಿದ 'ವೃಕ್ಷಮಾತೆ'. ತಮ್ಮ ಪತಿ ಚಿಕ್ಕಯ್ಯನವರೊಂದಿಗೆ ಹುಲಿಕಲ್ ಮತ್ತು ಕುದೂರು ನಡುವೆ 4.5 ಕಿ.ಮೀ. ಉದ್ದಕ್ಕೂ 385 ಆಲದ ಮರಗಳನ್ನು ನೆಟ್ಟು ಬೆಳೆಸಿದ್ದು, ಒಟ್ಟಾರೆ 8,000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟಿದ್ದಾರೆ. ಇವರ ಪರಿಸರ ಕಾಳಜಿಯನ್ನು ಗುರುತಿಸಿ ಭಾರತ ಸರ್ಕಾರ ರಾಷ್ಟ್ರೀಯ ನಾಗರಿಕ ಪ್ರಶಸ್ತಿ (1996), ಪದ್ಮಶ್ರೀ ಪ್ರಶಸ್ತಿ ನೀಡಿ (2019) ಗೌರವಿಸಿದೆ ಹಾಗೂ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು, ಗೌರವ ಡಾಕ್ಟರೇಟ್ ಪದವಿ (2020) ನೀಡಿ ಗೌರವಿಸಿದೆ. 2016 ರಲ್ಲಿ ಸಾಲುಮರದ ತಿಮ್ಮಕ್ಕ ರವರು ಪರಿಸರಕ್ಕೆ ನೀಡಿರುವ ಅಪಾರ ಸೇವೆಯನ್ನು ಗುರುತಿಸಿ ಬ್ರಿಟಿಷ್ ಬ್ರಾಡ್ಕಾಸ್ಟಿಂಗ್ ಕಾರ್ಪೊರೇಷನ್ ವಿಶ್ವದ ಅತ್ಯಂತ ಪ್ರಭಾವಶಾಲಿ ಮತ್ತು ಸ್ಪೂರ್ತಿದಾಯಕ ಮಹಿಳೆಯರಲ್ಲಿ ಒಬ್ಬರೆಂದು ಪಟ್ಟಿ ಮಾಡಿದೆ. ತಿಮ್ಮಕ್ಕನವರು ಅನಕ್ಷರಸ್ಥೆಯಾಗಿದ್ದರೂ ಸಹ ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಸಾಧನೆಗೈದು ದೇಶಕ್ಕೆ ಮಾದರಿಯಾಗಿದ್ದಾರೆ. ಆದರೆ, ಸದರಿಯವರು ದಿನಾಂಕ:14.11.2025 ರಂದು ನಿಧನರಾಗಿರುತ್ತಾರೆ. ಆದುದರಿಂದ, ಸದರಿಯವರು ಪರಿಸರ ಕ್ಷೇತ್ರಕ್ಕೆ ನೀಡಿರುವ ಅಪಾರ ಸೇವೆಯನ್ನು ಗೌರವಿಸಲು ವಿಶ್ವವಿದ್ಯಾನಿಲಯದ ಒಳಾಂಗಣ ಕ್ರೀಡಾಂಗಣದ ಮುಂಭಾಗದಲ್ಲಿರುವ ಉದ್ಯಾನವನಕ್ಕೆ **ದಿ. ಶ್ರೀಮತಿ ಸಾಲು ಮರದ ತಿಮ್ಮಕ್ಕ ವನ** – ಎಂದು ನಾಮಕರಣ ಮಾಡುವ ಕುರಿತು ದಿನಾಂಕ:30.12.2025 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ಪರಿಸರ ಪ್ರೇಮಿ ದಿವಂಗತ ಶ್ರೀಮತಿ ಸಾಲು ಮರದ ತಿಮ್ಮಕ್ಕನವರ ಸ್ಮರಣಾರ್ಥವಾಗಿ ಹಾಗೂ ಅವರು ಪರಿಸರ ಕ್ಷೇತ್ರಕ್ಕೆ ನೀಡಿರುವ ಅಪಾರ ಸೇವೆಯನ್ನು ಗೌರವಿಸುವ ಸಲುವಾಗಿ ದಾವಣಗೆರೆ ವಿಶ್ವವಿದ್ಯಾನಿಲಯದ ಒಳಾಂಗಣ ಕ್ರೀಡಾಂಗಣದ ಮುಂಭಾಗದಲ್ಲಿರುವ ಉದ್ಯಾನವನಕ್ಕೆ **ದಿ. ಶ್ರೀಮತಿ ಸಾಲುಮರದ ತಿಮ್ಮಕ್ಕ ಉದ್ಯಾನ ವನ** – ಎಂದು ನಾಮಕರಣ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು | ಕುಲಪತಿಗಳು

| ಅಭಿವೃದ್ಧಿ ವಿಭಾಗ – 41 | |
|---|---|
| ವಿಷಯ ಸಂಖ್ಯೆ: | ಸಿಂ.09(a)/(12/25) |

## –ಃ ಟಿಪ್ಪಣಿ ಃ–

**ವಿಷಯಃ ಮೆ॥ ಅಪೋಲೋ ಮೆಡಿಕಲ್ಸ್ & ಜನರಲ್ ಸ್ಟೋರ್ಸ್, ಹೊನ್ನಾಳಿ ಇವರಿಂದ ಖರೀದಿಸಿದ ಔಷಧ/ಚುಚ್ಚುಮದ್ದುಗಳಿಗೆ ಪಾವತಿಸಲಾದ ಮೊತ್ತಕ್ಕೆ ಘಟನೋತ್ತರ ಅನುಮತಿ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಅವಶ್ಯಕತೆಗೆ ತಕ್ಕಂತೆ ವೈದ್ಯಾಧಿಕಾರಿಗಳ ಸಲಹೆ ಪಡೆದು ಔಷಧ/ ಚುಚ್ಚುಮದ್ದುಗಳನ್ನು ನಿಯಮಾನುಸಾರ ದರ ಒಪ್ಪಂದದಲ್ಲಿ ಯಶಸ್ವಿಯಾದ ಸಂಸ್ಥೆ ಮೆ॥ ಅಪೋಲೋ ಮೆಡಿಕಲ್ಸ್ & ಜನರಲ್ ಸ್ಟೋರ್ಸ್, ಹೊನ್ನಾಳಿ – ಇವರಿಂದ ನಿಯಮಾನುಸಾರ ಖರೀದಿಸಲಾಗಿರುತ್ತದೆ. ಸದರಿ ಸಂಸ್ಥೆಯವರು ರೂ.6,45,886/–ಗಳ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ. ಆದುದರಿಂದ, ಔಷಧ/ ಚುಚ್ಚುಮದ್ದುಗಳನ್ನು ಖರೀದಿಸಿರುವ ಬಿಲ್ಲಿನ ಮೊತ್ತ ರೂ.6,45,886/– ಗಳನ್ನು ಮೆ॥ ಅಪೋಲೋ ಮೆಡಿಕಲ್ಸ್ & ಜನರಲ್ ಸ್ಟೋರ್ಸ್, ಹೊನ್ನಾಳಿ ಇವರಿಗೆ ನಿಯಮಾನುಸಾರ ಪಾವತಿಸಿರುವುದಕ್ಕೆ ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗೆ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಆರೋಗ್ಯ ಕೇಂದ್ರಕ್ಕೆ ಅವಶ್ಯಕತೆಗೆ ತಕ್ಕಂತೆ ವೈದ್ಯಾಧಿಕಾರಿಗಳ ಸಲಹೆಯಂತೆ ಔಷಧ/ ಚುಚ್ಚುಮದ್ದುಗಳನ್ನು ದರ ಒಪ್ಪಂದದಲ್ಲಿ ಯಶಸ್ವಿಯಾದ ಸಂಸ್ಥೆ ಮೆ॥ ಅಪೋಲೋ ಮೆಡಿಕಲ್ಸ್ & ಜನರಲ್ ಸ್ಟೋರ್ಸ್, ಹೊನ್ನಾಳಿ – ಇವರಿಂದ ಖರೀದಿಸಿರುವುದಕ್ಕೆ ಹಾಗೂ ಸದರಿ ಸಂಸ್ಥೆಯವರು ಸಲ್ಲಿಸಿದ ಬಿಲ್ಲಿನ ಬಾಬ್ತು ರೂ.6,45,886/– ಗಳನ್ನು ಸದರಿಯವರಿಗೆ ನಿಯಮಾನುಸಾರ ಪಾವತಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು. ಮುಂದುವರೆದು, ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಬೇಕಾಗುವ ಔಷದ/ ಚುಚ್ಚುಮದ್ದುಗಳನ್ನು "ಪ್ರಧಾನ ಮಂತ್ರಿ ಜನೌಷಧಿ ಕೇಂದ್ರ" ದಿಂದ ನಿಯಮಾನುಸಾರ ಖರೀದಿಸಲು ನಿರ್ಣಯಿಸಲಾಯಿತು.

ಕುಲಸಚಿವರು                                        ಕುಲಪತಿಗಳು

| ಅಭಿವೃದ್ಧಿ ವಿಭಾಗ – 42 | |
|---|---|
| ವಿಷಯ ಸಂಖ್ಯೆ: | ಸಿಂ.09(b)/(12/25) |

## –: ಟಿಪ್ಪಣಿ :–

**ವಿಷಯ: 2024–25ನೇ ಸಾಲಿನ ವಾರ್ಷಿಕ ವರದಿಯ ಮುದ್ರಣದ ಬಿಲ್ಲು ಪಾವತಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ 300 ವಾರ್ಷಿಕ ವರದಿಗಳ ಪುಸ್ತಕಗಳನ್ನು 150 ಕನ್ನಡ ಮತ್ತು 150 ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಅವುಗಳ ಜೊತೆಗೆ 300 ಸಿ.ಡಿ.ಗಳನ್ನು ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದರ ಬಾಬ್ತು ರೂ.2,61,960/– ಗಳನ್ನು ಸಹ್ಯಾದ್ರಿ ಪ್ರಿಂಟಿಂಗ್, ದಾವಣಗೆರೆ – ಇವರಿಗೆ ನಿಯಮಾನುಸಾರ ಪಾವತಿಸಲು ದಿನಾಂಕ:30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ 300 ವಾರ್ಷಿಕ ವರದಿಗಳ ಪುಸ್ತಕಗಳನ್ನು (150 ಕನ್ನಡ ಮತ್ತು 150 ಇಂಗ್ಲೀಷ್) ಮುದ್ರಿಸಿ ಅವುಗಳ ಜೊತೆಗೆ 300 ಸಿ.ಡಿ.ಗಳನ್ನು ದರಪಟ್ಟಿಯಲ್ಲಿ ಯಶಸ್ವಿಯಾದ ಸಂಸ್ಥೆ ಸಹ್ಯಾದ್ರಿ ಪ್ರಿಂಟಿಂಗ್, ದಾವಣಗೆರೆ ಇವರಿಂದ ಪಡೆದು ಸರ್ಕಾರಕ್ಕೆ ಸಲ್ಲಿಸಲಾದ ಬಿಲ್ಲಿನ ಬಾಬ್ತು ರೂ.2,61,960/– ಗಳನ್ನು ಸಹ್ಯಾದ್ರಿ ಪ್ರಿಂಟಿಂಗ್, ದಾವಣಗೆರೆ – ಇವರಿಗೆ ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಅಭಿವೃದ್ಧಿ ವಿಭಾಗ - 43 | |
|---|---|
| ವಿಷಯ ಸಂಖ್ಯೆ: | ಸಿಂ.09(c)/(12/25) |

## -: ಟಿಪ್ಪಣಿ :-

**ವಿಷಯಃ ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗದಿಂದ ಸಂಯೋಜನೆ ಕಾರ್ಯಕ್ಕಾಗಿ ಬಾಡಿಗೆ ವಾಹನಗಳನ್ನು ಮೆ॥ ಶ್ರೀ ಹರಿ ಟೂರ್ ಅಂಡ್ ಟ್ರಾವೆಲ್ಸ್, ದಾವಣಗೆರೆ ಇವರಿಂದ ಪಡೆಯಲಾಗಿದ್ದು, ವಾಹನಗಳ ಬಾಡಿಗೆ ಪಾವತಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ 2026-27ನೇ ಶೈಕ್ಷಣಿಕ ಸಾಲಿನ ಕಾಲೇಜು ಸಂಯೋಜನಾ ಕಾರ್ಯಕ್ಕೆ ಸಂಬಂಧಿಸಿದಂತೆ ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗಕ್ಕೆ Innova AC Car ಗಳನ್ನು ಮೆ॥ ಶ್ರೀ ಹರಿ ಟೂರ್ ಅಂಡ್ ಟ್ರಾವೆಲ್ಸ್, ದಾವಣಗೆರೆ ಇವರಿಂದ ನಿಯಮಾನುಸಾರ ದರಪಟ್ಟಿ ಮೂಲಕ ಬಾಡಿಗೆಗೆ ಪಡೆದು ಸಂಯೋಜನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಸದರಿ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಾದ ಕಾರುಗಳ ಒಟ್ಟು ಬಾಡಿಗೆ ಮೊತ್ತ ರೂ.2,75,000/-ಗಳನ್ನು ಮೆ॥ ಶ್ರೀ ಹರಿ ಟೂರ್ಸ್ ಅಂಡ್ ಟ್ರಾವೆಲ್ಸ್, ದಾವಣಗೆರೆ ಇವರಿಗೆ ಪಾವತಿಸಲು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2026-27ನೇ ಶೈಕ್ಷಣಿಕ ಸಾಲಿನ ಕಾಲೇಜು ಕಾರ್ಯಕ್ಕೆ ತೆರಳುವ ಸಮಿತಿಯ ಅಧ್ಯಕ್ಷರು/ ಸದಸ್ಯರುಗಳಿಗೆ ವಾಹನ ಸೌಲಭ್ಯಕ್ಕಾಗಿ Innova AC Car ಗಳನ್ನು ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಪಡೆಯಲಾಗಿದ್ದು, ಯಶಸ್ವಿಯಾದ ಸಂಸ್ಥೆಯಾದ ಮೆ॥ ಶ್ರೀ ಹರಿ ಟೂರ್ ಅಂಡ್ ಟ್ರಾವೆಲ್ಸ್, ದಾವಣಗೆರೆ ಇವರಿಗೆ ಕಾರುಗಳ ಒಟ್ಟು ಬಾಡಿಗೆ ಮೊತ್ತ ರೂ.2,75,000/- ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಅಭಿವೃದ್ಧಿ ವಿಭಾಗ – 44 | |
|---|---|
| ವಿಷಯ ಸಂಖ್ಯೆ: | ಸಿಂ.09(d)/(12/25) |

## –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಪೀಠೋಪಕರಣಗಳನ್ನು ಖರೀದಿಸುವ ಕುರಿತು.**

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಯೋಗಶಾಲೆಗೆ ಹಾಗೂ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳಿಗೆ ಈ ಕೆಳಕಂಡಂತೆ ಪೀಠೋಪಕರಣಗಳನ್ನು ಒದಗಿಸಿಕೊಡುವಂತೆ ಸಂಬಂಧಪಟ್ಟ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು ಕೋರಿರುತ್ತಾರೆ. ಹಾಗೂ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ವಿಶ್ವವಿದ್ಯಾನಿಲಯದಲ್ಲಿನ ಪ್ರಾಯೋಗಿಕ ಪಾಠ ಪ್ರವಚನಕ್ಕೆ ಬೇಕಾದ ಚೇರ್‌ಗಳು ಹಾಳಾಗಿರುವುದರಿಂದ ತರಗತಿಗಳಿಗೆ ಅಗತ್ಯವಾಗಿ ಬೇಕಾಗಿರುವ ಒಟ್ಟು 124 Folding Chairಗಳನ್ನು ಒದಗಿಸುವಂತೆ ಪ್ರಾಚಾರ್ಯರು ಮನವಿ ಸಲ್ಲಿಸಿರುವುದರಿಂದ ಈ ಕೆಳಕಂಡ ಪೀಠೋಪಕರಣಗಳನ್ನು ಅಂದಾಜು ಮೊತ್ತ ರೂ.13.00 ಲಕ್ಷದ ಮಿತಿಯೊಳಗೆ ಇ-ಟೆಂಡರ್ ಕರೆದು ನಿಯಮಾನುಸಾರ ಖರೀದಿಸಲು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

| 1 | 2 | 3 |
|---|---|---|
| **ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅವಶ್ಯವಿರುವ ಪೀಠೋಪಕರಣಗಳು** | **ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳಿಗೆ ಅವಶ್ಯವಿರುವ ಪೀಠೋಪಕರಣಗಳು** | **ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರಿಗೆ ಅವಶ್ಯವಿರುವ ಪೀಠೋಪಕರಣಗಳು** |
| Wooden Stool - 50<br>Podium - 50<br>Small Table - 10 | Table - 10<br>Chair - 10 | Steel Folding Chair - 124 |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಯೋಗಶಾಲೆಗೆ ಅವಶ್ಯವಿರುವ ಪೀಠೋಪಕರಣಗಳು, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಾಪಕರುಗಳಿಗೆ ಅವಶ್ಯವಿರುವ ಪೀಠೋಪಕರಣಗಳನ್ನು ಹಾಗೂ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರಿಗೆ ಅವಶ್ಯವಿರುವ ಈ ಮೇಲ್ಕಂಡ ಪಟ್ಟಿಯಲ್ಲಿರುವ ಪೀಠೋಪಕರಣಗಳನ್ನು ಅಂದಾಜು ಮೊತ್ತ ರೂ.13.00 ಲಕ್ಷದ ಮಿತಿಯೊಳಗೆ ಇ-ಟೆಂಡರ್ ಕರೆದು ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಅಭಿವೃದ್ಧಿ ವಿಭಾಗ – 45 | |
|---|---|
| ವಿಷಯ ಸಂಖ್ಯೆ: | ಸಿಂ.09(e)/(12/25) |

## –: ಟಿಪ್ಪಣಿ :–

**ವಿಷಯಃ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ತರಗತಿಗಳಿಗೆ Projector & Screen ಖರೀದಿಸುವ ಬಗ್ಗೆ.**

*********

ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಅಧ್ಯಕ್ಷರು ಹಾಗೂ ಸಂಯೋಜನಾಧಿಕಾರಿಗಳು ತಮ್ಮ ವಿಭಾಗಕ್ಕೆ Projector & Screen ಗಳ ಅವಶ್ಯಕತೆ ಇರುವುದಾಗಿ ಮನವಿ ಸಲ್ಲಿಸಿರುವ ಹಿನ್ನಲೆಯಲ್ಲಿ 10 Projector & 10 Screen ಗಳನ್ನು ಖರೀದಿಸಲು ಅಂದಾಜು ರೂ.4.00ಲಕ್ಷಗಳ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ 10 Projector & 10 Screen ಗಳನ್ನು ಅಂದಾಜು ಮೊತ್ತ ರೂ.4.00 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಮೂಲಕ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಅಭಿವೃದ್ಧಿ ವಿಭಾಗ – 46 | |
|---|---|
| ವಿಷಯ ಸಂಖ್ಯೆ: | ಸಿಂ.09(f)/(12/25) |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿನ ವಿವಿಧ ವಿಭಾಗಗಳ ಕಛೇರಿ ಕೆಲಸಕ್ಕಾಗಿ ಗಣಕಯಂತ್ರಗಳನ್ನು ಖರೀದಿಸುವ ಬಗ್ಗೆ.

*********

ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿನ ಈ ಕೆಳಕಂಡ ವಿವಿಧ ವಿಭಾಗಗಳಲ್ಲಿ ಉಪಯೋಗಿಸಲಾಗುತ್ತಿರುವ ಗಣಕಯಂತ್ರಗಳು ಹಾಳಾಗಿರುವುದರಿಂದ ದೈನಂದಿನ ಕಛೇರಿ ಕೆಲಸಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ತುರ್ತಾಗಿ 05 ಗಣಕಯಂತ್ರಗಳನ್ನು ಒದಗಿಸಿಕೊಡುವಂತೆ ಕೋರಿರುತ್ತಾರೆ.

ಆದ್ದರಿಂದ, ಒಟ್ಟು 05 ಹೈ–ವರ್ಷನ್ ಗಣಕಯಂತ್ರಗಳನ್ನು ನಿಯಮಾನುಸಾರ ದರಪಟ್ಟಿ ಕರೆದು ಖರೀದಿಸಲು ಅಂದಾಜು ಮೊತ್ತ ರೂ.4.00 ಲಕ್ಷಗಳ ಮಿತಿಯೊಳಗೆ ಖರೀದಿಸಲು ದಿನಾಂಕ:30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

| ಕ್ರ.ಸಂ. | ವಿಭಾಗ | ಕಂಪ್ಯೂಟರ್ |
|---|---|---|
| 1 | ಪ್ರಾಧಿಕಾರಗಳ ವಿಭಾಗ | 1 |
| 2 | ಕಾಲೇಜು ಅಭಿವೃದ್ಧಿ ಪರಿಷತ್ತು | 1 |
| 3 | ಅಭಿವೃದ್ಧಿ ವಿಭಾಗ | 1 |
| 4 | ಅರ್ಥಶಾಸ್ತ್ರ ಅಧ್ಯಯನ ವಿಭಾಗ | 1 |
| 5 | ಹರಿಯಬ್ಬೆ ಘಟಕ ಕಾಲೇಜು | 1 |
| | **ಒಟ್ಟು:** | **05** |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿವಿಧ ವಿಭಾಗಗಳಾದ– ಪ್ರಾಧಿಕಾರಗಳ ವಿಭಾಗ, ಕಾಲೇಜು ಅಭಿವೃದ್ಧಿ ಪರಿಷತ್ತು, ಅಭಿವೃದ್ಧಿ ವಿಭಾಗ, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಹರಿಯಬ್ಬೆ ಘಟಕ ಕಾಲೇಜಿಗೆ ಅಗತ್ಯವಿರುವ **ಒಟ್ಟು 05 ಹೈ–ವರ್ಷನ್ ಗಣಕ ಯಂತ್ರಗಳನ್ನು** ಅಂದಾಜು ಮೊತ್ತ ರೂ.4.00 ಲಕ್ಷಗಳ ಮಿತಿಯೊಳಗೆ ದರಪಟ್ಟಿ ಮೂಲಕ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ – 47 | |
|---|---|
| ವಿಷಯ ಸಂಖ್ಯೆ: | ಸಿಂ.09(g)/(12/25) |

## –: ಟಿಪ್ಪಣಿ :–

ವಿಷಯಃ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಕಂಪ್ಯೂಟರ್ ಲ್ಯಾಬ್‌ನ್ನು ನವೀಕರಣಗೊಳಿಸಲು ಮತ್ತು ಕಂಪ್ಯೂಟರ್‌ಗಳನ್ನು ಒದಗಿಸುವ ಕುರಿತು.

ಉಲ್ಲೇಖ: ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರ ಪತ್ರ ಸಂಖ್ಯೆಃ ವಿದೃಕಮ/ಶೈಕ್ಷಣಿಕ/2025-26/208, ದಿನಾಂಕಃ 11.11.2025

*********

ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ಇವರು ಕಂಪ್ಯೂಟರ್ ಲ್ಯಾಬ್‌ನ್ನು ನವೀಕರಣಗೊಳಿಸಲು ಹಾಗೂ ಹೈ-ವರ್ಷನ್ 30 ಕಂಪ್ಯೂಟರ್‌ಗಳನ್ನು, 30 ಟೇಬಲ್ ಮತ್ತು 30 ಕುರ್ಚಿಗಳನ್ನು ಒದಗಿಸಿಕೊಡಬೇಕೆಂದು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅಂದಾಜು ಮೊತ್ತದ ವಿವರ ಈ ಕೆಳಗಿನಂತಿದೆಃ-

| | | |
|---|---|---|
| 01 | ದೃಶ್ಯಕಲಾ ಮಹಾವಿದ್ಯಾಲಯದ ಕಂಪ್ಯೂಟರ್ ಲ್ಯಾಬ್ ನವೀಕರಣಕ್ಕೆ | ಅಂದಾಜು ಮೊತ್ತ 30.00 ಲಕ್ಷಗಳಿಗೆ |
| 02 | ದೃಶ್ಯಕಲಾ ಮಹಾವಿದ್ಯಾಲಯಕ್ಕೆ 30 ಹೈ ವರ್ಷನ್ ಕಂಪ್ಯೂಟರ್‌ಗಳನ್ನು, 30 ಟೇಬಲ್ ಮತ್ತು 30 ಕುರ್ಚಿಗಳನ್ನು ಖರೀದಿಸಲು | |

ಮೇಲ್ಕಂಡ ಅಂದಾಜು ಮೊತ್ತಕ್ಕೆ ನಿಯಮಾನುಸಾರ ಇ-ಟೆಂಡರ್ ಕರೆದು ಮುಂದಿನ ಪ್ರಕ್ರಿಯೆ ಕೈಗೊಳ್ಳಲು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಕಂಪ್ಯೂಟರ್ ಪ್ರಯೋಗಾಲಯವನ್ನು ನವೀಕರಣಗೊಳಿಸುವ ಕೆಲಸವನ್ನು ಹಾಗೂ ಪ್ರಯೋಗಾಲಯಕ್ಕೆ ಅಗತ್ಯವಿರುವ 30 ಹೈ-ವರ್ಷನ್ ಕಂಪ್ಯೂಟರ್‌ಗಳು, 30 ಟೇಬಲ್ ಮತ್ತು 30 ಕುರ್ಚಿಗಳನ್ನು ಅಂದಾಜು ಮೊತ್ತ ರೂ.30.00 ಲಕ್ಷಗಳ ಮಿತಿಯೊಳಗೆ ಇ-ಟೆಂಡರ್ ಮೂಲಕ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಕೌಶಲ್ಯಾಭಿವೃದ್ಧಿ ಕೇಂದ್ರ – 48 | |
|---|---|
| ವಿಷಯ ಸಂಖ್ಯೆ: | ಸಿಂ.10(a)/(12/25) |

## –: ಟಿಪ್ಪಣಿ :–

ವಿಷಯ: **ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ (PMKVY 4.0) ಅಡಿಯಲ್ಲಿ Short term Training (STT) ಅನ್ನು ವಿಶ್ವವಿದ್ಯಾನಿಲಯದ ಸರ್ಕಾರಿ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸುವ ಕುರಿತು.**

ಉಲ್ಲೇಖ
1. ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮಂತ್ರಾಲಯ ರವರ ಪತ್ರಸಂಖ್ಯೆ:SCH-11/10/2025 O/o PMKVY (74824) ದಿನಾಂಕ:20.11.2025
2. ವಿಶ್ವವಿದ್ಯಾನಿಲಯ ಪ್ರಸ್ತಾವನೆ ದಿನಾಂಕ:12.12.2025

****

ಉಲ್ಲೇಖಿತ (1)ರ ಪತ್ರದ ಮುಖೇನ ರಾಜ್ಯದಲ್ಲಿ PMKVY-4.0 ರಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಲಾಗಿದೆ. ಸದರಿ ಯೋಜನೆಯಡಿ ಅಲ್ಪಾವಧಿ ಕೌಶಲ್ಯಾಧರಿತ ತರಬೇತಿ – (STT) ಯನ್ನು 17.03.2026 ರೊಳಗೆ ಪೂರ್ಣಗೊಳಿಸಲು ಸೂಚಿಸಿರುತ್ತಾರೆ.

ಅದರಂತೆ, ಸದರಿ ಕಾರ್ಯಕ್ರಮವನ್ನು ಮೊದಲ ಹಂತದಲ್ಲಿ ಅನುಷ್ಠಾನಗೊಳಿಸಲು ನಮ್ಮ ವಿಶ್ವವಿದ್ಯಾಲಯದಡಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ 17 ಸರ್ಕಾರಿ ಕಾಲೇಜುಗಳನ್ನು ಆಯ್ಕೆಗೊಳಿಸಲಾಗಿದ್ದು, ಈ ಕಾಲೇಜುಗಳಲ್ಲಿ Data Analysis Associate & Web Developer ಜಾಬ್ ರೋಲ್‌ಗಳಡಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಕೆ.ಟಿ.ಪಿ.ಪಿ–1999 ರ ನಿಯಮಾವಳಿಗಳ ಪ್ರಕಾರ EOI (Expression of interest) ಕರೆದು ಒಡಂಬಡಿಕೆ (MOU) ಮಾಡಿಕೊಳ್ಳಲು ಕೌಶಲ್ಯಾಭಿವೃದ್ಧಿ ಕೇಂದ್ರದ ನೋಡಲ್ ಅಧಿಕಾರಿಗಳು ಮನವಿ ಸಲ್ಲಿಸಿದ್ದು, ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಿಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗೆಗಾಗಿ ಮಂಡಿಸಿದೆ.

**<u>Annexure</u>**

List of Government First Grade Colleges Identified for Implementation under PMKVY 4.0
Davangere University

| Sl.No | Institution Name | Name of the University |
|---|---|---|
| 1. | Government First Grade College, Davangere | Davangere University |
| 2. | Government First Grade College, Harihara | Davangere University |
| 3. | Government First Grade College, Jagaluru | Davangere University |
| 4. | Government First Grade College, Baramasagara | Davangere University |
| 5. | Government First Grade College, Holalkere | Davangere University |
| 6. | Government First Grade College, Honnali | Davangere University |
| 7. | Government First Grade College, Javanagondanahalli | Davangere University |
| 8. | Government First Grade College, Molkalmuru | Davangere University |
| 9. | Government First Grade College, Nyamathi | Davangere University |
| 10. | Government First Grade College, Parasuramapura | Davangere University |
| 11. | Government First Grade College, Santhebennuru | Davangere University |
| 12. | Government First Grade College, Hosadurga | Davangere University |
| 13. | Government First Grade Women's College, Davangere | Davangere University |
| 14. | Janatha Govt. First Grade College, Basavapatna | Davangere University |
| 15. | Sri Sri Shivalingeshwara Swamy Govt. First Grade College, Channagiri | Davangere University |
| 16. | Sri. Basaveshwara Govt. First Grade College, Mayakonda | Davangere University |
| 17. | Vedavathi Govt. First Grade College, Hiriyur | Davangere University |

:: ನಿರ್ಣಯ ::

ಭಾರತ ಸರ್ಕಾರದ – ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ PMKVY-4.0 ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ದಾವಣಗೆರೆ ವಿಶ್ವವಿದ್ಯಾನಿಲಯದ ಈ ಮೇಲ್ಕಂಡ 17 ಸರ್ಕಾರಿ ಕಾಲೇಜುಗಳನ್ನು ಆಯ್ಕೆಗೊಳಿಸಿ, Data Analysis Associate & Web Developer ಜಾಬ್ ರೋಲ್‌ಗಳಡಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು **ಕೆ.ಟಿ.ಪಿ.ಪಿ–1999 ನಿಯಮಾವಳಿಗಳ ಪ್ರಕಾರ** EOI (Expression of interest) ಕರೆದು ಒಡಂಬಡಿಕೆ (MOU) ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು — ಕುಲಪತಿಗಳು

| ಐ.ಕ್ಯೂ.ಎ.ಸಿ ಘಟಕ – 49 | |
|---|---|
| ವಿಷಯ ಸಂಖ್ಯೆ: | ಸಿಂ.11(a)/(12/25) |

## –ಃ ಟಿಪ್ಪಣಿ ಃ–

**ವಿಷಯ:** **ಜಿಲ್ಲಾ ಪಂಚಾಯತ್, ದಾವಣಗೆರೆ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ ನಡುವೆ ತಿಳುವಳಿಕೆ ಒಪ್ಪಂದ ಮಾಡಿಕೊಳ್ಳುವ ಕುರಿತು.**

ಉಲ್ಲೇಖ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಪತ್ರಸಂಖ್ಯೆ: ಜಿಪಂದಾ/ ಯೋವಿ/ ಜಿಮಾಅವ/ 2025–26 ದಿನಾಂಕ:16.12.2025

****

ಜಿಲ್ಲಾ ಪಂಚಾಯತ್, ದಾವಣಗೆರೆ ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ **ಪ್ರೊ. ಕೆ.ಬಿ. ರಂಗಪ್ಪ,** ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರನ್ನು **ದಾವಣಗೆರೆ ಜಿಲ್ಲಾ ಮಾನವ ಅಭಿವೃದ್ಧಿ – 2025** ವರದಿಯನ್ನು ತಯಾರಿಸಲು ನೇಮಕ ಮಾಡಲಾಗಿದೆ. ಈ ವರದಿಯನ್ನು ತಯಾರಿಸಲು ನಮ್ಮ ವಿಶ್ವವಿದ್ಯಾನಿಲಯ ಮತ್ತು ಜಿಲ್ಲಾ ಪಂಚಾಯತ್ ದಾವಣಗೆರೆ ಇವರ ನಡುವೆ **ತಿಳುವಳಿಕೆ ಒಪ್ಪಂದ** (Memorandum of Understanding) ವನ್ನು ಮಾಡಿಕೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಿಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ **ಜಿಲ್ಲೆಯ ಮಾನವ ಅಭಿವೃದ್ಧಿ – 2025** ವರದಿ **ತಯಾರಿಸಲು** ದಾವಣಗೆರೆ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ **ಪ್ರೊ. ಕೆ.ಬಿ. ರಂಗಪ್ಪ,** ಪ್ರಾಧ್ಯಾಪಕರು – ಇವರು ಜಿಲ್ಲಾ ಪಂಚಾಯತ್ ದಾವಣಗೆರೆ ವತಿಯಿಂದ ಆಯ್ಕೆಯಾಗಿರುವುದರಿಂದ ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ಜಿಲ್ಲಾ ಪಂಚಾಯತ್, ದಾವಣಗೆರೆ – ಇವರ ನಡುವೆ ನಿಯಮಾನುಸಾರ MoU (Memorandum of Understanding) ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಐ.ಕ್ಯೂ.ಎ.ಸಿ ಘಟಕ – 50 | |
|---|---|
| ವಿಷಯ ಸಂಖ್ಯೆ: | ಸಿಂ.11(b)/(12/25) |

## –: ಟಿಪ್ಪಣಿ :–

ವಿಷಯ: **ಜಿಲ್ಲಾ ಪಂಚಾಯತ್, ಚಿತ್ರದುರ್ಗ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ ನಡುವೆ ತಿಳುವಳಿಕೆ ಒಪ್ಪಂದ ಮಾಡಿಕೊಳ್ಳುವ ಕುರಿತು.**

ಉಲ್ಲೇಖ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರ ಪತ್ರಸಂಖ್ಯೆ: ಚಿಜಿಪಂ:ಯೋವಿ(1)ಸಿಆರ್:15/ 2025–26 ದಿನಾಂಕ:16.12.2025

****

ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ **ಪ್ರೊ. ಹುಚ್ಚೇಗೌಡ.,** ಪ್ರಾಧ್ಯಾಪಕರು ಇವರನ್ನು **ಚಿತ್ರದುರ್ಗ ಜಿಲ್ಲಾ ಮಾನವ ಅಭಿವೃದ್ಧಿ – 2025** ವರದಿಯನ್ನು ತಯಾರಿಸಲು ನೇಮಕ ಮಾಡಲಾಗಿದೆ. ಈ ವರದಿಯನ್ನು ತಯಾರಿಸಲು ನಮ್ಮ ವಿಶ್ವವಿದ್ಯಾನಿಲಯ ಮತ್ತು ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರ ನಡುವೆ **ತಿಳುವಳಿಕೆ ಒಪ್ಪಂದ** (Memorandum of Understanding) ವನ್ನು ಮಾಡಿಕೊಳ್ಳಲು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗೆಗಾಗಿ ಮಂಡಿಸಿದೆ.

### :: ನಿರ್ಣಯ ::

ಚಿತ್ರದುರ್ಗ **ಜಿಲ್ಲೆಯ ಮಾನವ ಅಭಿವೃದ್ಧಿ – 2025 ವರದಿ ತಯಾರಿಸಲು** ದಾವಣಗೆರೆ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ **ಪ್ರೊ. ಹುಚ್ಚೇಗೌಡ,** ಪ್ರಾಧ್ಯಾಪಕರು – ಇವರು ಜಿಲ್ಲಾ ಪಂಚಾಯತ್ ಚಿತ್ರದುರ್ಗ ವತಿಯಿಂದ ಆಯ್ಕೆಯಾಗಿರುವುದರಿಂದ ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು ಜಿಲ್ಲಾ ಪಂಚಾಯತ್, ಚಿತ್ರದುರ್ಗ – ಇವರ ನಡುವೆ ನಿಯಮಾನುಸಾರ MoU (Memorandum of Understanding) ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು — ಕುಲಪತಿಗಳು

| ಐ.ಕ್ಯೂ.ಎ.ಸಿ ಘಟಕ – 51 | |
|---|---|
| ವಿಷಯ ಸಂಖ್ಯೆ: | ಸಿಂ.11(c)/(12/25) |

## –: ಟಿಪ್ಪಣಿ :–

**ವಿಷಯ: 2024–25ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ (AAA) ಸಮಿತಿಯ ಖರ್ಚು–ವೆಚ್ಚಗಳನ್ನು ಭರಿಸಲು ಅನುಮೋದನೆ ನೀಡುವ ಕುರಿತು.**

****

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ Academic and Administrative Audit (AAA) ಸಮಿತಿಯ ವರದಿಯನ್ನು ನ್ಯಾಕ್‌ಗೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ, ವಿಶ್ವವಿದ್ಯಾನಿಲಯಕ್ಕೆ 2024–25ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ Academic and Administrative Audit (AAA) ಸಮಿತಿಯ ಮೌಲ್ಯಮಾಪನ ನಡೆಸಲು ಭೇಟಿ ನೀಡುತ್ತಿರುವುದರಿಂದ ಸದರಿ ಸಮಿತಿಗೆ ಖರ್ಚು–ವೆಚ್ಚಗಳನ್ನು ಭರಿಸಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಅಂದಾಜು ಖರ್ಚು–ವೆಚ್ಚಗಳನ್ನು ಪಾವತಿಸಲು ದಿನಾಂಕ:30.12.2025ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

| ಕ್ರ.ಸಂ. | ವಿಷಯ | ಖರ್ಚು ವೆಚ್ಚ |
|---|---|---|
| 1 | ಪ್ರಯಾಣ ಭತ್ಯೆ, ದಿನಭತ್ಯೆ (ಟಿಎ/ಡಿಎ) | 1,00,000/– |
| 2 | ಅತಿಥ್ಯ ವೆಚ್ಚ | 1,00,000/– |
| 3 | ವಾಹನ ಸೌಲಭ್ಯ | 50,000/– |
| 4 | ಇತರೆ | 50,000/– |
| | ಒಟ್ಟು: | **3,00,000/–** |

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ 2024–25ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ Academic and Administrative Audit (AAA) ಸಮಿತಿಯು ಮೌಲ್ಯಮಾಪನ ನಡೆಸಲು ಭೇಟಿ ನೀಡುತ್ತಿರುವುದರಿಂದ ಸದರಿ ಸಮಿತಿಗೆ ಈ ಮೇಲ್ಕಂಡ ಅಂದಾಜು ಖರ್ಚು–ವೆಚ್ಚಗಳಿಗಾಗಿ ರೂ.3.00 ಲಕ್ಷಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ ಘಟಕ – 52 | |
|---|---|
| ವಿಷಯ ಸಂಖ್ಯೆ: | ಸಿಂ.11(d)/(12/25) |

## –: ಟಿಪ್ಪಣಿ :–

**ವಿಷಯ: 2024–25ನೇ ಸಾಲಿನ ಹಸಿರು ಲೆಕ್ಕ ಪರಿಶೋಧನೆ ನಡೆಸಲು ಅನುಮೋದನೆ ನೀಡುವ ಕುರಿತು.**

****

ನ್ಯಾಕ್‌ಗೆ ಸಂಬಂಧಿಸಿದಂತೆ AQAR 2024–25ರ ವರದಿಯ 7ನೇ Criterion ರಲ್ಲಿ ಹಸಿರು ಲೆಕ್ಕಪರಿಶೋಧನೆ ವರದಿಯನ್ನು ಅಂತರ್ಜಾಲದಲ್ಲಿ ನ್ಯಾಕ್‌ಗೆ ಸಲ್ಲಿಸಬೇಕಾಗಿರುತ್ತದೆ. ತತ್ಸಂಬಂಧ 2024–25ನೇ ಸಾಲಿನ ಹಸಿರು ಲೆಕ್ಕಪರಿಶೋಧನೆಯನ್ನು ಬಾಹ್ಯ ಸಮಿತಿಯು (Green Audit) (Green, Energy, Environmental Audit) ಪರಿಶೀಲನೆ ನಡೆಸಿ ವರದಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ, ಸದರಿ ಸಮಿತಿಯು ಹಸಿರು ಲೆಕ್ಕಪರಿಶೋಧನೆ ನಡೆಸಲು ದಿನಾಂಕ:30.12.2025ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಹಸಿರು ಲೆಕ್ಕಪರಿಶೋಧನೆಯನ್ನು ಬಾಹ್ಯ ಸಮಿತಿಯು (Green Audit) (Green, Energy, Environmental Audit) ಪರಿಶೀಲನೆ ನಡೆಸಿ ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 53 | |
|---|---|
| ವಿಷಯ ಸಂಖ್ಯೆ: | ಸಿಂ.01(c)/(12/25) |

# –: ಟಿಪ್ಪಣಿ :–

**ವಿಷಯ : ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

******

ಶ್ರೀಮತಿ ಶಾರದಾ ಪಾಟೀಲ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | **ದಾವಣಗೆರೆ ವಿಶ್ವವಿದ್ಯಾನಿಲಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಪಡೆಯುತ್ತಿರುವ ವೇತನ ಹಾಗೂ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸುವಿಕೆಗೆ ಅನುಸರಿಸುವ ನಿಯಮಾವಳಿಗಳ ಕುರಿತು.** |
| ನಿರ್ಣಯ | ಅತಿಥಿ ಉಪನ್ಯಾಸಕರಿಗೆ ಸಂಬಂಧಿಸಿದಂತೆ ವಿಷಯ ಸಂಖ್ಯೆ: 02 (e) 12/25 ರಲ್ಲಿ ಚರ್ಚಿಸಲಾಗಿದ್ದು, ಅತಿಥಿ ಉಪನ್ಯಾಸಕರ ವೇತನ ಹಾಗೂ ಸೇವೆಯಿಂದ ಬಿಡುಗಡೆಗೊಳಿಸುವ ಕುರಿತು ಚರ್ಚಿಸಲಾಗಿದ್ದು ಅದರಂತೆ ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| **ವಿಷಯ–2** | **ವಿದ್ಯಾರ್ಥಿಗಳ ಬಸ್ ತಂಗುದಾಣ ನಿರ್ಮಿಸುವ ಕುರಿತು ಕೈಗೊಂಡ ಕ್ರಮ.** |
| ನಿರ್ಣಯ | ವಿಶ್ವವಿದ್ಯಾನಿಲಯದ ಮುಂಭಾಗದಲ್ಲಿ ಬಸ್ ತಂಗುದಾಣವನ್ನು ನಿರ್ಮಿಸಲು ಲೋಕೋಪಯೋಗಿ ಇಲಾಖೆಯಿಂದ ಅನುಮತಿ ಪಡೆಯಲಾಗಿದ್ದು, ಸದರಿ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ, ದಾವಣಗೆರ ಇವರ ಮುಖಾಂತರ ಕೈಗೊಳ್ಳಲಾಗುವುದೆಂದು ಡಾ. ಪ್ರಶಾಂತ್ ಎನ್.ಸಿ. ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಸಭೆಗೆ ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಗಳು ಸಮ್ಮತಿ ಸೂಚಿಸಿದರು. |
| **ವಿಷಯ–3** | **ವಸತಿ ನಿಲಯಗಳಿಗೆ ಉಸ್ತುವಾರಿ ಸಮಿತಿಗಳನ್ನು ರಚಿಸುವ ಕುರಿತು.** |
| ನಿರ್ಣಯ | ಈಗಾಗಲೇ ನಿಲಯಪಾಲಕರು, ಮುಖ್ಯ ನಿಲಯಪಾಲಕರು ಮತ್ತು ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ಘಟಕ ಇವರುಗಳು ಸತತವಾಗಿ ವಸತಿ ನಿಲಯಗಳ ಉಸ್ತುವಾರಿ ನೋಡಕೊಳ್ಳುತ್ತಿರುವುದರಿಂದ ವಸತಿ ನಿಲಯಗಳಿಗೆ ಹೆಚ್ಚುವರಿಯಾಗಿ ಉಸ್ತುವಾರಿ ಸಮಿತಿ ರಚಿಸುವ ಅವಶ್ಯಕತೆ ಇರುವುದಿಲ್ಲವೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 54 | |
|---|---|
| ವಿಷಯ ಸಂಖ್ಯೆ: | ಸಿಂ.01(d)/(12/25) |

## –: ಟಿಪ್ಪಣಿ :–

**ವಿಷಯ : ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

******

ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಎಂ.ಪಿ.ಇಡಿ ವಿಭಾಗಕ್ಕೆ ಎನ್.ಸಿ.ಆರ್.ಟಿ. ವತಿಯಿಂದ ಮಾನ್ಯತೆ ಪಡೆಯಲು ಕ್ರಮಕೈಗೊಳ್ಳುವ ಬಗ್ಗೆ ಚರ್ಚೆಯಾಗಿದೆ. ಆದರೆ, ಕಾರ್ಯರೂಪಕ್ಕೆ ಬಂದಿಲ್ಲ ಇದರ ಬಗ್ಗೆ ಕ್ರಮ ಕೈಗೊಳ್ಳಲು ದಿನಾಂಕ ನಿಗದಿಪಡಿಸುವುದು.** |
| ನಿರ್ಣಯ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರೊ. ವೆಂಕಟೇಶ್ ಕೆ, ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ನ್ಯಾಯಾಲಯದಲ್ಲಿ ಮತ್ತೊಮ್ಮೆ ಅಪೀಲು ಹಾಕುವಂತೆ ಹಾಗೂ ಎಂ.ಪಿ.ಇಡಿ ವಿಭಾಗಕ್ಕೆ ಎನ್.ಸಿ.ಆರ್.ಟಿ. ವತಿಯಿಂದ ಮಾನ್ಯತೆ ಪಡೆಯಲು ಮತ್ತೊಮ್ಮೆ ಪತ್ರಿಸುವಂತೆ ಸಭೆಯು ಒಮ್ಮತದಿಂದ ನಿರ್ಣಯಿಸಿತು. |
| **ವಿಷಯ–2** | **ಸರ್ಕಾರಕ್ಕೆ ಸಲ್ಲಿಸಿರುವ ದಾವಣಗೆರೆ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ (ಸಿ ಅಂಡ್ ಆರ್) ಕರಡು ಪ್ರತಿ ಒದಗಿಸುವುದು.** |
| ನಿರ್ಣಯ | ಮಾನ್ಯ ಕುಲಪತಿಗಳು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿರುವ ದಾವಣಗೆರೆ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ವೃಂದ ಮತ್ತು ನೇಮಕಾತಿ ನಿಯಮಗಳ (ಸಿ ಅಂಡ್ ಆರ್) ಕರಡು ಪ್ರತಿಯನ್ನು ಶ್ರೀ ತಿಪ್ಪೇಸ್ವಾಮಿ ಹೆಚ್, ಮಾನ್ಯ ಸಿಂಡಿಕೇಟ್ ಸದಸ್ಯರು ಇವರಿಗೆ ಮಾ.ಸ.ನಿ. ವಿಭಾಗದಿಂದ ಕಳುಹಿಸಲು ಕುಲಸಚಿವರು (ಆ) ಇವರಿಗೆ ಸೂಚಿಸಿದರು. |
| **ವಿಷಯ–3** | **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಸಿ ಅಂಡ್ ಆರ್ ಪ್ರಕಾರ ಅರ್ಹತೆ ಹೊಂದಿದ ದಿನಾಂಕದಿಂದ ಜಾರಿಗೆ ಬರುವಂತೆ ಕೇಡರ್‌ವಾರು ಪದೋನ್ನತಿ ನೀಡುವ ಕುರಿತು.** |
| ನಿರ್ಣಯ | ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಅನ್ಯ ವಿಶ್ವವಿದ್ಯಾನಿಲಯದ ಪರಿಣಿತರನ್ನೊಳಗೊಂಡಂತೆ ಕುಲಸಚಿವರ ನೇತೃತ್ವದಲ್ಲಿ ಸಮಿತಿ ರಚಿಸಲು ನಿರ್ಣಯಿಸಲಾಯಿತು. |
| **ವಿಷಯ–4** | **2024–25 ಮತ್ತು 2025–26 ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಂದಾಜು ಪಟ್ಟಿಯಲ್ಲಿರುವಂತೆ (GYMKHANA ACTIVITIES) ಜಿಮ್ಖಾನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು ಸಂಗ್ರಹವಾದ ಮೊತ್ತ ಮತ್ತು ಅದರ ಖರ್ಚು ವೆಚ್ಚದ ವಿವರಗಳ ಬಗ್ಗೆ ಮಾಹಿತಿ ನೀಡುವುದು.** |
| ನಿರ್ಣಯ | 2024–25 ಮತ್ತು 2025–26 ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಂದಾಜು ಪಟ್ಟಿಯಲ್ಲಿರುವಂತೆ (GYMKHANA ACTIVITIES) ಜಿಮ್ಖಾನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು ಸಂಗ್ರಹವಾದ ಮೊತ್ತ ಮತ್ತು ಅದರ ಖರ್ಚು ವೆಚ್ಚದ ವಿವರಗಳ ಮಾಹಿತಿಯನ್ನು ಸದರಿಯವರಿಗೆ ಒದಗಿಸುವಂತೆ ಜಿಮ್ಖಾನ ಅಧ್ಯಕ್ಷರಿಗೆ ತಿಳಿಸುವಂತೆ ಮಾನ್ಯ ಕುಲಪತಿಗಳು ಕುಲಸಚಿವರು (ಆ) ಇವರಿಗೆ ನಿರ್ದೇಶನ ನೀಡಿದರು. |

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 55 | |
|---|---|
| ವಿಷಯ ಸಂಖ್ಯೆ: | ಸಿಂ.01(e)/(12/25) |

# –: ಟಿಪ್ಪಣಿ :–

**ವಿಷಯ : ಡಾ. ಪ್ರಶಾಂತ ಎನ್.ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

******

ಡಾ. ಪ್ರಶಾಂತ ಎನ್.ಸಿ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | **2025–26 ರ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಬೋಧನೆ/ಸಂಶೋಧನಾ/ವಿಸ್ತರಣಾ ಚಟುವಟಿಕೆಗಳು ಎಂಬ ಲೆಕ್ಕ ಶೀರ್ಷಿಕೆಯಲ್ಲಿ 3,25,05,120–00 ರೂ. ಗಳನ್ನು ಅಂದಾಜು ಮಾಡಲಾಗಿದ್ದು, ಇದರಲ್ಲಿ ಸಂಶೋಧನಾ ಚಟುವಟಿಕೆಗಳಲ್ಲಿ ವ್ಯಯ ಮಾಡಲು ನಿಗದಿತ ವಿಭಾಗವಾರು ಮಾಹಿತಿ ನೀಡತಕ್ಕದ್ದು.** |
| ನಿರ್ಣಯ | ಡಾ. ಪ್ರಶಾಂತ ಎನ್.ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು ಇವರಿಗೆ – 2025–26 ರ ಆಯವ್ಯಯ ಅಂದಾಜು ಪಟ್ಟಿಯನ್ನು ಒದಗಿಸುವಂತೆ ಮಾನ್ಯ ಕುಲಪತಿಗಳು ಹಣಕಾಸು ಅಧಿಕಾರಿಗಳಿಗೆ ಸೂಚಿಸುವಂತೆ ಕುಲಸಚಿವರು(ಆ) ಇವರಿಗೆ ನಿರ್ದೇಶನ ನೀಡಿದರು. |
| **ವಿಷಯ–2** | **ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಪ್ರಯೋಗಾಲಯಕ್ಕೆ ಒದಗಿಸುವ ವಿಭಾಗವಾರು ವೆಚ್ಚದ ವಿವರವನ್ನು ನೀಡುವುದು.** |
| ನಿರ್ಣಯ | ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಪ್ರಯೋಗಾಲಯಕ್ಕೆ ಒದಗಿಸುವ ವಿಭಾಗವಾರು ವೆಚ್ಚದ ವಿವರವನ್ನು ಸದರಿಯವರಿಗೆ ಒದಗಿಸುವಂತೆ ಹಣಕಾಸು ಅಧಿಕಾರಿಗಳಿಗೆ ಸೂಚಿಸುವಂತೆ ಮಾನ್ಯ ಕುಲಪತಿಗಳು ಕುಲಸಚಿವರು(ಆ) ಇವರಿಗೆ ನಿರ್ದೇಶನ ನೀಡಿದರು. |
| **ವಿಷಯ–3** | **ವಿಶ್ವವಿದ್ಯಾನಿಲಯಕ್ಕೆ 47 KV ನ 2 ಜನರೇಟರ್‌ಗಳನ್ನು ಖರೀದಿಸಿದ್ದು ಇವುಗಳ ಉಪಯೋಗ ಮತ್ತು ವೆಚ್ಚಗಳ ವಿವರಗಳನ್ನು ನೀಡುವ ಕುರಿತು.** |
| ನಿರ್ಣಯ | 47 KV ನ 2 ಜನರೇಟರ್‌ಗಳನ್ನು ಖರೀದಿಸಿದ್ದು ಇವುಗಳ ಉಪಯೋಗ ಮತ್ತು ವೆಚ್ಚಗಳ ವಿವರವನ್ನು ಸದರಿಯವರಿಗೆ ಒದಗಿಸಲು ಇಂಜಿನಿಯರಿಂಗ್ ವಿಭಾಗಕ್ಕೆ ಸೂಚಿಸುವಂತೆ ಮಾನ್ಯ ಕುಲಪತಿಗಳು ಕುಲಸಚಿವರು(ಆ) ಇವರಿಗೆ ನಿರ್ದೇಶನ ನೀಡಿದರು. |
| **ವಿಷಯ–4** | **ಯು.ಜಿ.ಸಿ. STARTUP GRANTS ನ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ರೂ.16,00,000.00 ಅಂದಾಜು ಮಾಡಲಾಗಿದ್ದು ಚಟುವಟಿಕೆಗಳ ವಿವರಗಳನ್ನು ನೀಡಬೇಕಾಗಿ ಕೇಳಿಕೊಳ್ಳುತ್ತೇವೆ. 2024–25ನೇ ಸಾಲಿನಲ್ಲಿ 37,83,350 ರೂ. ಗಳನ್ನು ಖರ್ಚು ಮಾಡಿದ್ದು ಇದರ ವಿವರ ನೀಡುವುದು.** |
| ನಿರ್ಣಯ | ಯು.ಜಿ.ಸಿ. STARTUP GRANTS ನ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ರೂ.16,00,000.00 ಅಂದಾಜು ಮಾಡಿರುವ ಚಟುವಟಿಕೆಗಳ ವಿವರ ಹಾಗೂ 2024–25ನೇ ಸಾಲಿನಲ್ಲಿ 37,83,350 ರೂ. ಗಳನ್ನು ಖರ್ಚು ವೆಚ್ಚಗಳ ವಿವರಗಳನ್ನು ಸದರಿಯವರಿಗೆ ಒದಗಿಸಲು ಮಾನ್ಯ ಕುಲಪತಿಗಳು ಹಣಕಾಸು ಅಧಿಕಾರಿಗಳಿಗೆ ಸೂಚಿಸುವಂತೆ ಕುಲಸಚಿವರು(ಆ) ಇವರಿಗೆ ನಿರ್ದೇಶನ ನೀಡಿದರು. |

ಕುಲಸಚಿವರು                ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 56 | |
|---|---|
| ವಿಷಯ ಸಂಖ್ಯೆ: | ಸಿಂ.01(f)/(12/25) |

# –: ಟಿಪ್ಪಣಿ :–

**ವಿಷಯ : ಶ್ರೀ ಪ್ರಶಾಂತ ಆರ್.ಟಿ., ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ ಕುರಿತು.**

******

ಶ್ರೀ ಪ್ರಶಾಂತ ಆರ್.ಟಿ, ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | **ದಿ. ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು, ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರ ಇವರ ಮರಣ ಹೊಂದಿದ್ದು, ವಿಶ್ವವಿದ್ಯಾನಿಲಯದಲ್ಲಿ ಇವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸುವ ಕುರಿತು.** |
| ನಿರ್ಣಯ | ದಿ. ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರು, ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರ ಇವರ ನಿಧನಕ್ಕೆ ದಿನಾಂಕ:16.12.2025 ರಂದು ಎಂ.ಬಿ.ಎ. ಸಭಾಂಗಣದಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುವ ಕುರಿತು ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಗೆ ಗಮನಕ್ಕೆ ತಂದರು. |
| **ವಿಷಯ–2** | **ದಿ. ಡಾ. ಶಾಮನೂರು ಶಿವಶಂಕರಪ್ಪ ಇವರ ಕುರಿತು ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣವನ್ನು ಏರ್ಪಡಿಸುವ ಕುರಿತು.** |
| ನಿರ್ಣಯ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಕ್ರಮಕೈಗೊಳ್ಳಲಾಗುವದೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯು ಒಮ್ಮತದಿಂದ ಸಮ್ಮತಿ ಸೂಚಿಸಿತು. |
| **ವಿಷಯ–3** | **ದಾವಣಗೆರೆ ವಿಶ್ವವಿದ್ಯಾನಿಲಯದ ಕ್ರೀಡಾಂಗಣಕ್ಕೆ ದಿ. ಡಾ. ಶಾಮನೂರು ಶಿವಶಂಕರಪ್ಪ ರವರ ಹೆಸರನ್ನು ನಾಮಕರಣ ಮಾಡುವ ಕುರಿತು.** |
| ನಿರ್ಣಯ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| **ವಿಷಯ–4** | **ವಿಶ್ವವಿದ್ಯಾನಿಲಯದಲ್ಲಿ ಟೆಕ್‌ಮಿತ್ರ (AI Attendance) ನ್ನು ನಿರ್ಮಿಸುವ ಕುರಿತು.** |
| ನಿರ್ಣಯ | ವಿಶ್ವವಿದ್ಯಾನಿಲಯದ ಹಣಕಾಸಿನ ಲಭ್ಯತೆ ನೋಡಿಕೊಂಡು ಇ-ಟೆಂಡರ್ ಕರೆದು ಮುಂದಿನ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |

ಕುಲಸಚಿವರು

ಕುಲಪತಿಗಳು

# "ಅಧ್ಯಕ್ಷರ ಅಪ್ಪಣೆ ಮೇರಗೆ ಚರ್ಚಿಸಿದ ಇತರೆ ವಿಷಯಗಳು"

| ಕಾಲೇಜು ಅಭಿವೃದ್ಧಿ ಪರಿಷತ್ತು – 57 | |
|---|---|
| ಅಧ್ಯಕ್ಷರ ಅಪ್ಪಣೆ ಮೇರೆಗೆ | |
| ವಿಷಯ ಸಂಖ್ಯೆ: | ಸಿಂ.05(f)/(12/25) |

## –: ಟಿಪ್ಪಣಿ :–

ವಿಷಯ: **ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿನ ಪದವಿ ಕೋರ್ಸುಗಳಿಗೆ ಶಾಶ್ವತ ಸಂಯೋಜನೆ ನವೀಕರಣ ನೀಡಿರುವ ಕುರಿತು.**

ಉಲ್ಲೇಖ
1. ಸರ್ಕಾರದ ನೋಟಿಸ್ ಪತ್ರ ಸಂ:ಇಡಿ 132 ಯುಎನ್ಇ 2021 ಬೆಂಗಳೂರು, ದಿನಾಂಕ:11.08.2025
2. ಈ ಕಛೇರಿ ಪತ್ರ ಸಂ:ದಾವಿವಿ/ಸಿಡಿಸಿ/ಎ.ಆರ್.ಜಿ–09/2025–26/2415 ದಿನಾಂಕ:03.09.2025
3. ಸರ್ಕಾರದ ಪತ್ರ ಸಂ: ಇಡಿ 139 ಯುಎನ್ಇ 2025 ಬೆಂಗಳೂರು ದಿನಾಂಕ:22.12.2025

****

ದಾವಣಗೆರೆ ವಿಶ್ವವಿದ್ಯಾನಿಲಯವು ಮಾತೃ ವಿಶ್ವವಿದ್ಯಾನಿಲಯವಾದ ಕುವೆಂಪು ವಿಶ್ವವಿದ್ಯಾನಿಲಯದಿಂದ ವಿಭಜನೆಗೊಂಡು ದಿನಾಂಕ:18.08.2009ರಂದು ಸ್ಥಾಪನೆಗೊಂಡಿರುತ್ತದೆ. ಕುವೆಂಪು ವಿಶ್ವವಿದ್ಯಾನಿಲಯ ಸಂಯೋಜಿತ ಕಾಲೇಜುಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡ ನಂತರ, ಸಂಯೋಜನೆ ಅರ್ಜಿ ಕೋರಿ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. ಕೆಲವು ಕಾಲೇಜುಗಳು, ಕುವೆಂಪು ವಿಶ್ವವಿದ್ಯಾನಿಲಯದ ಅಡಿ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣ ಹೊಂದುತ್ತಾ ಬಂದಿರುತ್ತವೆ. ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಈ ಕೆಳಕಂಡ ಕಾಲೇಜುಗಳಿಗೆ 2022–23 ಮತ್ತು 2023–24ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣ ಆದೇಶ ನೀಡಲಾಗಿರುತ್ತದೆ.

**ಅನುಬಂಧ**

| ಕ್ರ.ಸಂ. | ಕಾಲೇಜುಗಳ ಹೆಸರು | ಕಾಲೇಜು ವಿಧ | ಪದವಿ | ಮಿತಿ | ಅವಧಿ |
|---|---|---|---|---|---|
| 1 | ಎ.ಅರ್.ಜಿ. ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು, ದಾವಣಗೆರೆ. | ಅನುದಾನಿತ | ಬಿ.ಎ | 180 | 2022–23 ರಿಂದ 2026–27 |
| | | | ಬಿ.ಬಿ.ಎ | 60 | |
| 2 | ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಅನುದಾನಿತ | ಬಿ.ಎ<br>ಬಿ.ಕಾಂ. | 180<br>60 | 2023–24 ರಿಂದ 2027–28 |
| 3 | ಶ್ರೀಮತಿ ಗಿರಿಯಮ್ಮ ಆರ್. ಕಾಂ. ಶ್ರೇ. ಮ. ಕಾಲೇಜು, ಹರಿಹರ. | ಅನುದಾನಿತ | ಬಿ.ಎ.<br>ಬಿ.ಕಾಂ. | 165<br>60 | 2023–24 ರಿಂದ 2027–28 |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳಲ್ಕೆರೆ. | ಸರ್ಕಾರಿ | ಬಿ.ಎ. | 60<br>60<br>60 | 2023–24 ರಿಂದ 2027–28 |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ | ಸರ್ಕಾರಿ | ಬಿ.ಎ | 90<br>90<br>90<br>90<br>90<br>90 | 2023–24 ರಿಂದ 2027–28 |
| | | | ಬಿ.ಬಿ.ಎ | 120 | |
| | | | ಬಿ.ಕಾಂ. | 400 | |
| | | | ಬಿ.ಎಸ್ಸಿ. | 120 | |

ಮುಂದುವರಿದಿದೆ...

ಕುಲಸಚಿವರು ಕುಲಪತಿಗಳು

| | | | | | |
|---|---|---|---|---|---|
| 6 | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ. | ಸರ್ಕಾರಿ | ಬಿ.ಎ<br>ಬಿ.ಬಿ.ಎ<br>ಬಿ.ಕಾಂ.<br>ಬಿ.ಎಸ್ಸಿ. | 90<br>90<br>60<br>140<br>60 | 2023-24<br>ರಿಂದ<br>2027-28 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರ | ಸರ್ಕಾರಿ | ಬಿ.ಎ<br>ಬಿ.ಬಿ.ಎ<br>ಬಿ.ಕಾಂ.<br>ಬಿ.ಎಸ್ಸಿ. | 90<br>90<br>60<br>60<br>60<br>150<br>45<br>60 | 2023-24<br>ರಿಂದ<br>2027-28 |
| 8 | ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ. | ಸರ್ಕಾರಿ | ಬಿ.ಎ.<br>ಬಿ.ಬಿ.ಎ<br>ಬಿ.ಎಸ್ಸಿ. | 270<br>60<br>90<br>60<br>120 | 2022-23<br>ರಿಂದ<br>2025-26 |
| 9 | ಎಸ್.ಜೆ.ಎಂ. ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಚಂದ್ರವಳ್ಳಿ, ಚಿತ್ರದುರ್ಗ. | ಅನುದಾನಿತ | ಬಿ.ಕಾಂ. | 60 | 2022-23<br>ರಿಂದ<br>2026-27 |
| 10 | ಎಸ್.ಎಂ.ಎಸ್. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹೊನ್ನಾಳ್ಳಿ. | ಅನುದಾನಿತ | ಬಿ.ಎ<br>ಬಿ.ಕಾಂ. | 90<br>90<br>90<br>45<br>45<br>60 | 2020-2021<br>ರಿಂದ<br>2024-25 |
| 11 | ಬಿ. ಪರಮೇಶ್ವರಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು, ಹೊಳಲ್ಕೆರೆ. | ಅನುದಾನಿತ | ಬಿ.ಎ.<br>ಬಿ.ಕಾಂ | 180<br>60 | 2022-23<br>ರಿಂದ<br>2026-27 |
| 12 | ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ | ಅನುದಾನಿತ | ಬಿ.ಎ.<br>ಬಿ.ಕಾಂ. | 270<br>60 | 2023-24<br>ರಿಂದ<br>2027-28 |
| 13 | ಎಂ.ಎಸ್.ಬಿ. ಕಲಾ ಮತ್ತು ವಾಣಿಜ್ಯ ಕಾಲೇಜು, ದಾವಣಗೆರೆ. | ಅನುದಾನಿತ | ಬಿ.ಎ.<br>ಬಿ.ಕಾಂ. | 180<br>120 | 2022-23<br>ರಿಂದ<br>2026-27 |
| 14 | ಎಸ್.ಜೆ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ಚಿತ್ರದುರ್ಗ. | ಅನುದಾನಿತ | ಬಿ.ಎ.<br>ಬಿ.ಕಾಂ. | 60 | 2023-24<br>ರಿಂದ<br>2027-28 |
| 15 | ಶ್ರೀ ಜಟಂಗಿ ರಾಮೇಶ್ವರ ಗ್ರಾಮಾಂತರ ಪ್ರಥಮ ದರ್ಜೆ ಕಾಲೇಜು, ರಾಂಪುರ. | ಅನುದಾನರಹಿತ | ಬಿ.ಎ.<br>ಬಿ.ಕಾಂ. | 120<br>60 | 2023-24<br>ರಿಂದ<br>2027-28 |
| 16 | ಶ್ರೀಶೈಲ ಶಿಕ್ಷಣ ಮಹಾವಿದ್ಯಾಲಯ, ಹರಿಹರ. | ಅನುದಾನಿತ | ಬಿ.ಇಡಿ. | 50 | 2022-23<br>ರಿಂದ<br>2026-27 |
| 17 | ಎಂ.ಎಂ. ಕಾಲೇಜ್ ಆಫ್ ಎಜುಕೇಷನ್, ದಾವಣಗೆರೆ | ಅನುದಾನಿತ | ಬಿ.ಇಡಿ. | 100 | 2022-23<br>ರಿಂದ<br>2026-27 |
| 18 | ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ. | ಅನುದಾನಿತ | ಬಿ.ಇಡಿ. | 100 | 2022-23<br>ರಿಂದ<br>2026-27 |
| 19 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪರಶುರಾಮಪುರ | ಸರ್ಕಾರಿ | ಬಿ.ಎ.<br>ಬಿ.ಕಾಂ.<br>ಬಿಎಸ್‌ಡಬ್ಲ್ಯೂ<br>ಬಿಬಿಎ | 160<br>40<br>40<br>40 | 2022-23<br>ರಿಂದ<br>2025-26 |

ಮುಂದುವರಿದಿದೆ...

ಕುಲಸಚಿವರು

ಕುಲಪತಿಗಳು

| | | | | | |
|---|---|---|---|---|---|
| 20 | ಜನತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವಾಪಟ್ಟಣ. | ಸರ್ಕಾರಿ | ಬಿ.ಎ.<br>ಬಿ.ಕಾಂ.<br>ಬಿಬಿಎ | 340<br>100<br>60 | 2023–24<br>ರಿಂದ<br>2027–28 |
| 21 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಸರ್ಕಾರಿ | ಬಿ.ಎ.<br>ಬಿ.ಕಾಂ. | 450<br>60 | 2023–24<br>ರಿಂದ<br>2027–28 |
| 22 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಗಳೂರು. | ಸರ್ಕಾರಿ | ಬಿ.ಎ.<br>ಬಿ.ಕಾಂ.<br>ಬಿ.ಎಸ್ಸಿ. | 240<br>60<br>60 | 2023–24<br>ರಿಂದ<br>2027–28 |
| 23 | ಶ್ರೀ ಬಸವೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಯಕೊಂಡ | ಸರ್ಕಾರಿ | ಬಿ.ಎ.<br>ಬಿ.ಕಾಂ. | 160<br>60 | 2023–24<br>ರಿಂದ<br>2027–28 |
| 24 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂತೆಬೆನ್ನೂರು. | ಸರ್ಕಾರಿ | ಬಿ.ಎ.<br>ಬಿ.ಕಾಂ.<br>ಬಿ.ಎಸ್ಸಿ.<br>ಬಿ.ಬಿ.ಎ. | 270<br>180<br>60<br>60 | 2023–24<br>ರಿಂದ<br>2027–28 |
| 25 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭರಮಸಾಗರ | ಸರ್ಕಾರಿ | ಬಿ.ಎ.<br>ಬಿ.ಕಾಂ. | 120<br>60 | 2023–24<br>ರಿಂದ<br>2027–28 |
| 26 | ವಾಣಿ ಸಕ್ಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯೂರು. | ಸರ್ಕಾರಿ | ಬಿ.ಎ<br>ಬಿಬಿಎ<br>ಬಿ.ಕಾಂ. | 870<br>40<br>120 | 2023–24<br>ರಿಂದ<br>2027–28 |
| 27 | ವೇದಾವತಿ ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಹಿರಿಯೂರು. | ಸರ್ಕಾರಿ | ಬಿ.ಎಸ್ಸಿ.<br>ಬಿಬಿಎ.<br>ಬಿಸಿಎ | 125<br>60<br>60 | 2023–24<br>ರಿಂದ<br>2027–28 |
| 28 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು. | ಸರ್ಕಾರಿ | ಬಿ.ಎ<br>ಬಿ.ಕಾಂ<br>ಬಿಬಿಎ<br>ಬಿಎಸ್‌ಡಬ್ಲೂ | 390<br>60<br>30<br>30 | 2023–24<br>ರಿಂದ<br>2027–28 |
| 29 | ಎ.ವಿ. ಕಮಲಮ್ಮ ಮಹಿಳಾ ಕಾಲೇಜು, ದಾವಣಗೆರೆ. | ಅನುದಾನಿತ | ಬಿ.ಎ<br>ಬಿ.ಕಾಂ<br>ಬಿ.ಎಸ್ಸಿ. | 400<br>120<br>160 | 2022–23<br>ರಿಂದ<br>2026–27 |
| 30 | ಡಿ.ಆರ್.ಎಂ. ಸೈನ್ಸ್ ಕಾಲೇಜು, ದಾವಣಗೆರೆ. | ಅನುದಾನಿತ | ಬಿ.ಎಸ್ಸಿ. | 340 | 2022–23<br>ರಿಂದ<br>2025–26 |
| 31 | ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಅನುದಾನರಹಿತ | ಬಿ.ಎ.<br>ಬಿ.ಕಾಂ.<br>ಬಿಬಿಎ | 180<br>60<br>60 | 2022–23<br>ರಿಂದ<br>2026–27 |
| 32 | ಸರ್ಕಾರಿ ಕಲಾ ಸ್ವಾಯತ್ತ ಕಾಲೇಜು, ಚಿತ್ರದುರ್ಗ. | ಸರ್ಕಾರಿ | ಬಿ.ಎ<br>ಬಿ.ಕಾಂ.<br>ಬಿ.ಬಿ.ಎ. | 490<br>120<br>120 | 2022–23<br>ರಿಂದ<br>2026–27 |
| 33 | ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ. | ಸರ್ಕಾರಿ | ಬಿ.ಎಸ್ಸಿ. | 420 | 2022–23<br>ರಿಂದ<br>2026–27 |
| 34 | ಮಹಾರಾಜ ಮದಕರಿ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ | ಅನುದಾನಿತ | ಬಿ.ಎ<br>ಬಿ.ಕಾಂ. | 230<br>60 | 2022–23<br>ರಿಂದ<br>2026–27 |
| 35 | ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | ಸರ್ಕಾರಿ | ಬಿ.ಎ.<br>ಬಿ.ಎಸ್ಸಿ.<br>ಬಿ.ಕಾಂ. | 900<br>180<br>120 | 2022–23<br>ರಿಂದ<br>2026–27 |

**ಮುಂದುವರಿದಿದೆ...**

ಕುಲಸಚಿವರು                                        ಕುಲಪತಿಗಳು

ಮುಂದುವರೆದು, ಸರ್ಕಾರದ ಆದೇಶದನ್ವಯ, 2022–23ನೇ ಸಾಲಿನಿಂದ ಸಂಯೋಜನೆಯನ್ನು UUCMS ತಂತ್ರಾಂಶದ ಮೂಲಕ ಕೈಗೊಳ್ಳಲಾಗುತ್ತಿದ್ದು, 2024–25ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ NEP ಬದಲಿಗೆ SEP ಶೈಕ್ಷಣಿಕ ನೀತಿ ಅನುಷ್ಠಾನಗೊಂಡಿದ್ದು, 2024–25ನೇ ಸಾಲಿನಲ್ಲಿ ಶಾಶ್ವತ/ಶಾಶ್ವತ ಸಂಯೋಜನೆ ನವೀಕರಣ ಹೊಂದಿರುವ ಕೋರ್ಸುಗಳನ್ನು ನಮೂದಿಸುವಾಗ ಸದರಿ ಕಾಲೇಜುಗಳ ಪ್ರಾಂಶುಪಾಲರು, ತಮ್ಮ ಹಂತದಲ್ಲಿ ಮುಂದುವರಿಕೆ ಸಂಯೋಜನೆಯಡಿ ತಪ್ಪಾಗಿ ನಮೂದಿಸಿರುತ್ತಾರೆ. ಸದರಿ ತಪ್ಪನ್ನು ಸರಿಪಡಿಸಿ ಕೊಡಲು ಕೋರಿ, UUCMS ತಂತ್ರಾಂಶದ ನಿರ್ವಾಹಕರಿಗೆ ಪತ್ರಿಸಿಲಾಗಿರುತ್ತದೆ. ಈ ಸಂಬಂಧ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯದಿಂದ ನೀಡಿರುವ ಶಾಶ್ವತ/ಶಾಶ್ವತ ಸಂಯೋಜನೆ ನವೀಕರಣ ಆದೇಶವನ್ನು ಪರಿಗಣಿಸಲು ಸಾಧ್ಯವಿಲ್ಲ. ಸದರಿ ಸಂಯೋಜನೆ ಆದೇಶಗಳಿಗೆ ಸರ್ಕಾರದ ಆದೇಶ ಕೋರಿರುತ್ತಾರೆ. ಅಲ್ಲದೆ, ಉಲ್ಲೇಖ (1)ರ ಪತ್ರದಲ್ಲಿ ಈ ಕುರಿತು ಸ್ಪಷ್ಟೀಕರಣ ಕೇಳಿ ಸರ್ಕಾರದಿಂದ ಪತ್ರ ಸ್ವೀಕೃತಗೊಂಡಿದ್ದು, ಉಲ್ಲೇಖ (2)ರಡಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು, ಈಗಾಗಲೇ ಸರ್ಕಾರಕ್ಕೆ ಪತ್ರಿಸಲಾಗಿರುತ್ತದೆ.

ಮುಂದುವರಿದು, ಉಲ್ಲೇಖ (3)ರ ಪತ್ರದಲ್ಲಿ ಸದರಿ ಸಮಜಾಯಿಷಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ. ದಾವಣಗೆರೆ ವಿಶ್ವವಿದ್ಯಾನಿಲಯವು ಪ್ರಾರಂಭಗೊಂಡ ನಂತರ, ಕಾಲೇಜು ಸಂಯೋಜನೆಯ ಕಾರ್ಯವಿಧಾನಕ್ಕೆ ಸಂಬಂಧಿಸಿದಂತೆ, ಕುವೆಂಪು ವಿಶ್ವವಿದ್ಯಾನಿಲಯದ ಅನುಸರಿಸಿದ ಕಾರ್ಯವಿಧಾನವನ್ನು ಪಾಲಿಸುತ್ತಾ ಬಂದಿರುತ್ತದೆ. ಮೇಲ್ಕಂಡ ಕಾಲೇಜುಗಳಲ್ಲಿ, ಕೆಲವು ಕಾಲೇಜುಗಳ ಶಾಶ್ವತ ಸಂಯೋಜನೆ ನವೀಕರಣವು ಕುವೆಂಪು ವಿಶ್ವವಿದ್ಯಾನಿಲಯದ ಹಂತದಲ್ಲಿ ಸರ್ಕಾರಕ್ಕೆ ಸಲ್ಲಿಸದೇ ನೀಡಲಾಗಿರುತ್ತದೆ. ಅದರಲ್ಲಿ ಕೆಲವು ಕಾಲೇಜುಗಳಿಗೆ ಮೊದಲ ಬಾರಿಗೆ ಶಾಶ್ವತ ಸಂಯೋಜನೆ ನೀಡುವಾಗ ಸರ್ಕಾರದ ಆದೇಶ ಪಡೆಯಲಾಗಿರುತ್ತದೆ. **ಅನುಬಂಧ** ದಲ್ಲಿರುವ ಕಾಲೇಜುಗಳು ಶಾಶ್ವತ ಸಂಯೋಜನೆ ನವೀಕರಣಕ್ಕೆ ಕೋರಿ ಅರ್ಜಿ ಸಲ್ಲಿಸಿದಾಗ, ನಿಯಮಾನುಸಾರ, ನಿಗದಿತ ಶುಲ್ಕ ಪಾವತಿಸಿಕೊಂಡು, ಸ್ಥಳೀಯ ತಪಾಸಣೆ ಭೇಟಿಗೆ ಒಳಪಡಿಸಿ, ಸಮಿತಿಯ ಶಿಫಾರಸ್ಸಿನ ಮೇರೆಗೆ, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು, ಕುವೆಂಪು ವಿಶ್ವವಿದ್ಯಾನಿಲಯವು ಅನುಸರಿಸಿದ ಕಾರ್ಯವಿಧಾನವನ್ನು ಹಾಗೂ 2022–23ನೇ ಶೈಕ್ಷಣಿಕ ಸಾಲಿನ ಪೂರ್ವದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಶಾಶ್ವತ ಸಂಯೋಜನೆ ನವೀಕರಣ ಪಾಲಿಸಿರುವ ಕಾರ್ಯವಿಧಾನವನ್ನು ಆಧರಿಸಿ, ಸಂಯೋಜನೆ ಆದೇಶ ನೀಡಲಾಗಿರುತ್ತದೆ.

ಅನುಬಂಧದಲ್ಲಿನ ಒಟ್ಟು–35, ಕಾಲೇಜುಗಳಲ್ಲಿ ಸರ್ಕಾರಿ–18, ಅನುದಾನಿತ–16, ಅನುದಾನರಹಿತ–01, ಗಳಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಕಾಲೇಜುಗಳಾಗಿರುತ್ತವೆ. ಉಲ್ಲೇಖ(3) ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ, ಶಾಶ್ವತ ಸಂಯೋಜನೆ ನವೀಕರಣಕ್ಕೆ ಸಂಬಂಧಿಸಿದಂತೆ, ಕೆಎಸ್‌ಯು ಕಾಯ್ದೆ 2000, 62(3)ರಡಿ ಸರ್ಕಾರಕ್ಕೆ ಸಲ್ಲಿಸದೇ, ಕೈಗೊಂಡಿರುವ ಪ್ರಕರಣದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವ ಕುರಿತು ದಿನಾಂಕ:30.12.2025ರಂದು ಜರುಗಲಿರುವ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ನವೀಕರಣಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 62 (3) ರಡಿ ಸರ್ಕಾರಕ್ಕೆ ಸಲ್ಲಿಸದೇ, ಕಾರ್ಯ ವಿಧಾನದ ಲೋಪವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 79 ರನ್ವಯ "ಸದ್ಭಾವನೆ ಮತ್ತು ಸದುದ್ದೇಶ" ದಿಂದ ಕೈಗೊಂಡ ಕ್ರಮವಾಗಿರುತ್ತದೆ. ಈ ಕುರಿತು ವಿಶ್ವವಿದ್ಯಾನಿಲಯದ ಯಾವುದೇ ಅಧಿಕಾರಿ/ ಸಿಬ್ಬಂದಿಗಳನ್ನಾಗಲಿ ಹೊಣೆಗಾರರನ್ನಾಗಿ ಮಾಡದೇ ಸದುದ್ದೇಶದಿಂದ ಕೈಗೊಂಡ ಈ ಕ್ರಮವನ್ನು ಪುನಾರಾವರ್ತಿಸದಂತೆ ಸಂಬಂಧಪಟ್ಟ ನೌಕರರು/ ಅಧಿಕಾರಿಗಳಿಗೆ ಎಚ್ಚರಿಕೆ ನೀಡುವುದು, ಸದರಿ ಕಾಲೇಜುಗಳಿಗೆ ವಿಶ್ವವಿದ್ಯಾನಿಲಯದ ಹಂತದಲ್ಲಿ ಶಾಶ್ವತ ಸಂಯೋಜನೆ ನವೀಕರಣಕ್ಕಾಗಿ ನೀಡಿರುವ ಆದೇಶಗಳಿಗೆ ಸರ್ಕಾರದ ನಿರ್ದೇಶಾನುಸಾರ ಕ್ರಮಕೈಗೊಂಡು ಹಾಗೂ ಸದರಿ ಪ್ರಕರಣವನ್ನು ಕೈಬಿಡುವಂತೆ ಕೋರಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 58 | |
|---|---|
| ಅಧ್ಯಕ್ಷರ ಅಪ್ಪಣೆ ಮೇರೆಗೆ | |
| ವಿಷಯ ಸಂಖ್ಯೆ: | ಸಿಂ.05(g)/(12/25) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಶ್ರೀ ಭಾನುಪ್ರಕಾಶ ಪಿ.ವಿ. ಕಾಲೇಜ್ ಆಫ್ ಎಜುಕೇಷನ್ – ಹೊನ್ನಾಳಿ ಈ ಕಾಲೇಜಿನ ಸಂಯೋಜನೆಯನ್ನು ಅಮಾನತ್ತಿನಲ್ಲಿಡುವ ಕುರಿತು.**

ಉಲ್ಲೇಖ ಸರ್ಕಾರದ ಪತ್ರ ಸಂ: ಇಡಿ 305 ಯುಎನ್ಇ 2025, ದಿನಾಂಕ:22.12.2025

****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಶ್ರೀ ಭಾನು ಪ್ರಕಾಶ ಪಿ.ವಿ. ಶಿಕ್ಷಣ ಮಹಾವಿದ್ಯಾಲಯ, ಹೊನ್ನಾಳಿ – ಈ ಕಾಲೇಜಿನ ಸಂಯೋಜನೆಯನ್ನು ಅಮಾನತ್ತಿನಲ್ಲಿಟ್ಟಿರುವ ಕುರಿತು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ರ ಪ್ರಕರಣ 63 (8) & (9) ನ್ನು ಉಲ್ಲಂಘಿಸಿ ದಿನಾಂಕ:06.09.2025 ರಂದು ಹೊರಡಿಸಿರುವ ಪ್ರಕಟಣೆಯನ್ನು ಕೂಡಲೇ ಹಿಂಪಡೆಯುವಂತೆ ಸೂಚಿಸಿರುತ್ತಾರೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ತನಿಖಾ ಸಮಿತಿಯು ನೀಡಿರುವ ವರದಿಯನ್ನು ದಿನಾಂಕ:11.08.2025, ದಿನಾಂಕ:04.09.2025 ಹಾಗೂ ದಿನಾಂಕ:29.10.2025 ರ ಪ್ರಾಧಿಕಾರಗಳ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಪ್ರಾಧಿಕಾರಗಳ ನಿರ್ಣಯವನ್ನು ಸಾರ್ವಜನಿಕರ/ವಿದ್ಯಾರ್ಥಿಗಳ ಗಮನಕ್ಕೆ ತರುವ ನಿಟ್ಟಿನಲ್ಲಿ ಹಾಗೂ ಅಮಾನತ್ತಿನಲ್ಲಿಟ್ಟಿರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದರಿಂದ ಸದರಿ ಕಾಲೇಜಿನಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯುಂಟಾಗಬಾರದೆಂಬ ಸದುದ್ದೇಶದಿಂದ ದಿನಾಂಕ:06.09.2025 ರಂದು ಪ್ರಕಟಣೆ ಹೊರಡಿಸಲಾಗಿತ್ತು.

ಈ ಮೇಲಿನ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ತರುತ್ತಾ, ದಿನಾಂಕ:06.09.2025ರ ಪ್ರಕಟಣೆಯನ್ನು ಹಿಂಪಡೆಯುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 63(1) ರಿಂದ 63 (8)ರವರೆಗೆ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯದನುಸಾರ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಸಂಬಂಧಿಸಿದಂತೆ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳುವ ಕುರಿತು ದಿನಾಂಕಃ30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಶ್ರೀ ಭಾನು ಪ್ರಕಾಶ ಪಿ.ವಿ. ಶಿಕ್ಷಣ ಮಹಾವಿದ್ಯಾಲಯ ಹೊನ್ನಾಳಿ – ಈ ಕಾಲೇಜಿನ ಸಂಯೋಜನೆಯನ್ನು ಅಮಾನತ್ತಿನಲ್ಲಿಟ್ಟಿರುವ ಕುರಿತು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ದಿನಾಂಕ:06.09.2025 ರಂದು ಹೊರಡಿಸಿರುವ ಪ್ರಕಟಣೆಯನ್ನು ಹಿಂಪಡೆದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ – 2000 ರ ಪ್ರಕರಣ 63 (1) ರಿಂದ 63 (8) ರ ವರೆಗೆ ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯದನುಸಾರ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಕುರಿತು ಮುಂದಿನ ಸೂಕ್ತ ನಿರ್ದೇಶನ ಕೋರಿ ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 59 | |
|---|---|
| ಅಧ್ಯಕ್ಷರ ಅಪ್ಪಣೆ ಮೇರೆಗೆ | |
| ವಿಷಯ ಸಂಖ್ಯೆ: | ಸಿಂ.05(h)/(12/25) |

## –: ಟಿಪ್ಪಣಿ :–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ – ಮಲೆಬೆನ್ನೂರು ಈ ಕಾಲೇಜಿನ ಸಂಯೋಜನೆಯನ್ನು ಅಮಾನತ್ತಿನಲ್ಲಿಡುವ ಕುರಿತು.

ಉಲ್ಲೇಖ ಸರ್ಕಾರದ ಪತ್ರ ಸಂ:ಇಡಿ 306 ಯುಎನ್ಇ 2025, ದಿನಾಂಕ:22.12.2025

****

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು – ಈ ಕಾಲೇಜಿನ ಸಂಯೋಜನೆಯನ್ನು ಅಮಾನತ್ತಿನಲ್ಲಿಟ್ಟಿರುವ ಕುರಿತು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ–2000 ರ ಪ್ರಕರಣ 63 (8) & (9) ನ್ನು ಉಲ್ಲಂಘಿಸಿ ದಿನಾಂಕ:06.09.2025 ರಂದು ಹೊರಡಿಸಿರುವ ಪ್ರಕಟಣೆಯನ್ನು ಕೂಡಲೇ ಹಿಂಪಡೆಯುವಂತೆ ಸೂಚಿಸಿರುತ್ತಾರೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ತನಿಖಾ ಸಮಿತಿಯು ನೀಡಿರುವ ವರದಿಯನ್ನು ದಿನಾಂಕ:11.08.2025, ದಿನಾಂಕ:04.09.2025 ಹಾಗೂ ದಿನಾಂಕ:29.10.2025 ರ ಪ್ರಾಧಿಕಾರಗಳ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಪ್ರಾಧಿಕಾರಗಳ ನಿರ್ಣಯವನ್ನು ಸಾರ್ವಜನಿಕರ/ವಿದ್ಯಾರ್ಥಿಗಳ ಗಮನಕ್ಕೆ ತರುವ ನಿಟ್ಟಿನಲ್ಲಿ ಹಾಗೂ ಅಮಾನತ್ತಿನಲ್ಲಿಟ್ಟಿರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದರಿಂದ ಸದರಿ ಕಾಲೇಜಿನಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯುಂಟಾಗಬಾರದೆಂಬ ಸದುದ್ದೇಶದಿಂದ ದಿನಾಂಕ:06.09.2025 ರಂದು ಪ್ರಕಟಣೆ ಹೊರಡಿಸಲಾಗಿತ್ತು.

ಈ ಮೇಲಿನ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ತರುತ್ತಾ, ದಿನಾಂಕ:06.09.2025ರ ಪ್ರಕಟಣೆಯನ್ನು ಹಿಂಪಡೆಯುವ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 63(1) ರಿಂದ 63 (8)ರವರೆಗೆ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯದನುಸಾರ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಸಂಬಂಧಿಸಿದಂತೆ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳುವ ಕುರಿತು ದಿನಾಂಕ:30.12.2025 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು – ಈ ಕಾಲೇಜಿನ ಸಂಯೋಜನೆಯನ್ನು ಅಮಾನತ್ತಿನಲ್ಲಿಟ್ಟಿರುವ ಕುರಿತು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ದಿನಾಂಕ:06.09.2025 ರಂದು ಹೊರಡಿಸಿರುವ ಪ್ರಕಟಣೆಯನ್ನು ಹಿಂಪಡೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ – 2000 ರ ಪ್ರಕರಣ 63 (1) ರಿಂದ (8) ರಡಿ ಕೈಗೊಂಡ ಕ್ರಮಗಳಿಗೆ ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳ ಸಭೆಯಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಕುರಿತು ಮುಂದಿನ ಸೂಕ್ತ ನಿರ್ದೇಶನ ಕೋರಿ ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 60 | |
|---|---|
| ಅಧ್ಯಕ್ಷರ ಅಪ್ಪಣೆ ಮೇರೆಗೆ | |
| ವಿಷಯ ಸಂಖ್ಯೆ: | ಸಿಂ.06(j)/(12/25) |

## –: ಟಿಪ್ಪಣಿ :–

**ವಿಷಯ : ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಹಾಲುವರ್ತಿ ಹಾಗೂ ಹುಳುಪಿನಕಟ್ಟೆಯಲ್ಲಿರುವ ಖಾಲಿ ಪ್ರದೇಶದಲ್ಲಿ ಅಂತರಾಷ್ಟ್ರೀಯ ಸ್ಟೇಡಿಯಂ ನಿರ್ಮಿಸಲು ನೀಲಿ ನಕಾಶೆ ತಯಾರಿಸುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಹಾಲುವರ್ತಿ ಸರ್ವೆ ನಂ.55 ರಲ್ಲಿರುವ 61 ಎಕರೆ ಹಾಗೂ ಹುಳುಪಿನ ಕಟ್ಟೆ ಸರ್ವೆ ನಂ.43 ರಲ್ಲಿರುವ 17 ಎಕರೆ 1 ಗುಂಟೆ ಜಾಗದಲ್ಲಿ ರಾಷ್ಟ್ರೀಯ/ ಅಂತರಾಷ್ಟ್ರೀಯ ಸ್ಟೇಡಿಯಂ (ಆಟದ ಮೈದಾನ) ನಿರ್ಮಿಸಲು ನೀಲಿ ನಕಾಶೆ (Blue Print) ತಯಾರಿಸುವ ಅಗತ್ಯವಿದ್ದು, ನೀಲಿ ನಕಾಶೆ ತಯಾರಿಸುವ ಪೂರ್ವ ತಯಾರಿಗಾಗಿ ಅಂದಾಜು ಮೊತ್ತ ರೂ.5.00 ಲಕ್ಷಗಳ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಹಾಲುವರ್ತಿ ಸರ್ವೆ ನಂ.55 ರಲ್ಲಿರುವ 61 ಎಕರೆ ಹಾಗೂ ಹುಳುಪಿನ ಕಟ್ಟೆ ಸರ್ವೆ ನಂ.43 ರಲ್ಲಿರುವ 17 ಎಕರೆ 1 ಗುಂಟೆ ಜಾಗದಲ್ಲಿ ಅಂತರಾಷ್ಟ್ರೀಯ ಸ್ಟೇಡಿಯಂ ನಿರ್ಮಿಸಲು ನೀಲಿ ನಕಾಶೆ (Blue Print) ತಯಾರಿಸುವ ಪೂರ್ವ ತಯಾರಿಗಾಗಿ ಅಂದಾಜು ಮೊತ್ತ ರೂ.5.00 ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಕ್ರೀಡಾ ವಿಭಾಗ – 61 | |
|---|---|
| ಅಧ್ಯಕ್ಷರ ಅಪ್ಪಣೆ ಮೇರೆಗೆ | |
| ವಿಷಯ ಸಂಖ್ಯೆ: | ಸಿಂ.12(a)/(12/25) |

# –: ಟಿಪ್ಪಣಿ :–

**ವಿಷಯ : ವರ್ಲ್ಡ್ ಚಾಂಪಿಯನ್‌ಶಿಪ್‌ಗೆ ಹೋದ ಕ್ರೀಡಾಪಟುವಿಗೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಯನ್ನು ಭರಿಸುವ ಕುರಿತು.**

******

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ – ಈ ಕಾಲೇಜಿನ ವಿದ್ಯಾರ್ಥಿಯಾದ ಶ್ರೀ ಭೀಷ್ಮ ಬಿ., ಇವರು ಬಿ.ಎ, 3ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದು, ಇವರು 2025–26ನೇ ಸಾಲಿನಲ್ಲಿ ನವೆಂಬರ್ 27, 28ನೇ ತಾರೀಕಿನಂದು ಥೈಲ್ಯಾಂಡ್‌ನಲ್ಲಿ ನಡೆದ ಬಾಡಿ ಬಿಲ್ಡಿಂಗ್ ವರ್ಲ್ಡ್ ಚಾಂಪಿಯನ್‌ಶಿಫ್‌ನಲ್ಲಿ ಭಾರತವನ್ನು ಪ್ರತಿನಿದಿಸಿದ್ದು, ಈ ಕ್ರೀಡಾಕೂಟವು ಬಾಡಿ ಬಿಲ್ಡಿಂಗ್ ಅಸೋಸಿಯೇಷನ್ ಇಂದ ಅನುಮೋದನೆ ಪಡೆದಿರುವುದರಿಂದ ಕ್ರೀಡಾಕೂಟಕ್ಕೆ ತಮ್ಮ ಸ್ವಂತ ಹಣದಿಂದ ಭಾಗವಹಿಸಿರುತ್ತಾರೆ ಹಾಗೂ ಸದರಿ ಸ್ಪರ್ಧೆಯಲ್ಲಿ 04 ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ.

ತತ್ಸಂಬಂಧ, ಶ್ರೀ ಭೀಷ್ಮ ಬಿ., ಇವರು ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸಲು ಈ ಕೆಳಕಂಡಂತೆ ಖರ್ಚು–ವೆಚ್ಚ ಭರಿಸಿದ್ದು, ಸದರಿ ಮೊತ್ತದಲ್ಲಿ ಯಾವುದಾದರೂ ಖರ್ಚು–ವೆಚ್ಚಗಳನ್ನು ವಿಶ್ವವಿದ್ಯಾನಿಲಯದಿಂದ ಭರಿಸಿಕೊಡುವಂತೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ಮನವಿಯನ್ನು ದಿನಾಂಕ:30.12.2025ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| ಕ್ರ.ಸಂ. | ಖರ್ಚಿನ ವಿವರ | ಮೊತ್ತ |
|---|---|---|
| 1 | ದಿನಾಂಕ:26.11.2025 ರಂದು ದಾವಣಗೆರೆ ಇಂದ ಬೆಂಗಳೂರಿಗೆ ಹೋದ ಪ್ರಯಾಣ ವೆಚ್ಚ | 1,000 |
| 2 | ದಿನಾಂಕ:27.11.2025 ರಂದು ಬೆಂಗಳೂರಿನಿಂದ ಥೈಲ್ಯಾಂಡ್‌ಗೆ ವಿಮಾನ ವೆಚ್ಚ | 15,000 |
| 3 | ದೇಹ ಧಾರ್ಢ್ಯ ನೊಂದಣಿ ಶುಲ್ಕ | 65,000 |
| 4 | 5 ದಿನದ ರೂಮ್ ಮತ್ತು ಸಾರಿಗೆ | 30,000 |
| 5 | ಫುಡ್–ಡಯಟ್‌ಗೆ | 30,000 |
| 6 | ಥೈಲ್ಯಾಂಡ್ ಇಂದ ಬೆಂಗಳೂರಿಗೆ ವಿಮಾನ ವೆಚ್ಚ | 15,000 |
| 7 | ಬೆಂಗಳೂರಿನಿಂದ ದಾವಣಗೆರೆಗೆ ಪ್ರಯಾಣ ವೆಚ್ಚ | 1,000 |
| | ಒಟ್ಟು ವೆಚ್ಚ: | **1,57,000** |

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ – ಈ ಕಾಲೇಜಿನ ವಿದ್ಯಾರ್ಥಿಯಾದ ಶ್ರೀ ಭೀಷ್ಮ ಬಿ., ಇವರು ಥೈಲ್ಯಾಂಡ್‌ನಲ್ಲಿ ನಡೆದ ಬಾಡಿ ಬಿಲ್ಡಿಂಗ್ ವರ್ಲ್ಡ್ ಚಾಂಪಿಯನ್‌ಶಿಫ್‌ನಲ್ಲಿ ಭಾರತವನ್ನು ಪ್ರತಿನಿದಿಸಿ 04 ಪ್ರಶಸ್ತಿಗಳನ್ನು ಪಡೆದಿರುವುದಕ್ಕೆ ಸಭೆಯು ಹರ್ಷವ್ಯಕ್ತಪಡಿಸಿತು. ಮುಂದುವರೆದು, ಸದರಿ ವಿದ್ಯಾರ್ಥಿಯು ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಒಟ್ಟು ಖರ್ಚು–ವೆಚ್ಚದ ಬಿಲ್ಲುಗಳನ್ನು ನಿಯಮಾನುಸಾರ ಪರಿಶೀಲಿಸಿ, ಅದರಲ್ಲಿ ಆಡಿಟ್ ಆಕ್ಷೇಪಣೆಗಳಿಗೆ ಒಳಪಡದಿರುವ ಬಿಲ್ಲುಗಳನ್ನು ಪರಿಗಣನೆಗೆ ತೆಗೆದುಕೊಂಡು ಒಟ್ಟು ವೆಚ್ಚ ರೂ.1,57,000/– ಗಳಲ್ಲಿ ಶೇಕಡ 50% ರಷ್ಟು ಮೊತ್ತವನ್ನು "ವಿಶೇಷ ಪ್ರಕರಣ"ವೆಂದು ಪರಿಗಣಿಸಿ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಶ್ರೀ ಭೀಷ್ಮ ಬಿ., ಇವರ ಖಾತೆಗೆ ನಿಯಮಾನುಸಾರ ಭರಿಸಲು ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕೊನೆಯಲ್ಲಿ ಕುಲಸಚಿವರು(ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು                ಕುಲಪತಿಗಳು